"That in sub-clause (5), after the words "provisions of" the words, figures and brackets "sub-section (2) of section 16" shall be inserted."

The motion was adopted.

Mr. DEPUTY SPEAKER.—The question is:

"That Clause 109 as amended stand part of ths Bill."

The motion was adopted.

Clause 109 as amended was added to the Bill.

Mr. DEPUTY SPEAKER.—Clauses 110 to 132. The question is:

"That Clauses 110 to 132, both inclusive, stand part of the Bill."

The motion was adopted.

Clauses 110 to 132, both inclusive, were added to the Bill.

Mr. DEPUTY SPEAKER.—Clause 1, Short Title and Preamble. The question is:

"That Clause 1, the Short Title and the Preamble, stand part of the Bill."

The motion was adopted.

Clause 1, the Short Title and the Preamble were added to the Bill.

Motion to pass.

Sri MALI MARIAPPA.—Sir, I move:

"That the Mysore Co-operative Societies Bill, 1958, as reported by the Joint Select Committee and as amended, be passed."

Mr. DEPUTY SPEAKER.—The question is:

"That the Mysore Co-operative Societies Bill, 1958, as reported by the Joint Select Committee, and as amended, be passed."

The motion was adopted.

Mr. DEPUTY SPEAKER.—The House will now rise for recess and meet after half an hour.

The House adjourned for recess at Five Minutes past Three of the Clock and re-assembled at Thirty-five Minutes past Three of the Clock.

[DR. R. NAGAN GOWDA in the Chair.]

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಈ ನಭೆಯು ನಡೆಯುತ್ತಿರುವಾಗ, ಹಾಗೂ ಬಡ್ಜೆಟ್ ಸೆಷನ್ ನಡೆಯುತ್ತಿರುವಾಗ ಕೂಡ ಹೇಳಿದೆ, ಸದಸ್ಯರ ಹಕ್ಕು ಬಾಧ್ಯತೆಗೆ ಧಕ್ಕೆ ತರುವ ಒಂದು ಹೇಳಿಕೆಯನ್ನು ಮುಖ್ಯಮಂತ್ರಿಗಳು ಇಂದು ಕೊಟ್ಟಿದ್ದಾರೆ. ಏನೆಂದರೆ, ಹಾಸನ ಡಿಸ್ಟ್ರಿಕ್ಟಿನಲ್ಲಿ ಪಾನನಿರೋಧವನ್ನು ಹೊಳೇ ನರಸೀಪುರ ಮತ್ತು ಇತರ ಕೆಲವು ಭಾಗಗಳಿಗೆ introduce ಮಾಡುತ್ತೇವೆಂದು ತಿಳಿಸಿದ್ದಾರೆ.....

Mr. CHAIRMAN (DR. R. NAGAN GOWDA).—It is better that you give notice and bring it before the House tomorrow after the question time.

MYSORE VILLAGE PANCHAYATS AND LOCAL BOARDS BILL, 1959.

(as reported by the Joint Select Committee).

Motion to consider.

Sri T. SUBRAMANYA (Minister for Law, Labour and Local Self-Government).—Sir, I move:

"That the Mysore Village Panchayats and Local Boards Bill, 1959, as reported by the Joint Select Committee, be taken into consideration."

Mr. CHAIRMAN.—Motion moved:

"That the Mysore Village Panchayats and Local Boards Bill, 1959, as reported by the Joint Select Committee, be taken into consideration."

Before we commence, I suggest that if the House agrees we might finish consideration of the Bill today itself.

Sri C. K. RAJAIAH SETTY (Chikkanayakanahalli).—It is an important Bill. It cannot be finished so early. It is better that we take up this Bill tomorrow also.

Mr. CHAIRMAN.—The Bill is put down for three days. When we consider the Bill clause by clause we will be going into it in detail and I think that is the time when you should spend more number of hours. Anyway I would like to be guided by the opinion of the House.

Sri T. SUBRAMANYA.—Anyway, general discussion on the Bill when it was referred to the Select Committee has taken place at very great length. Certain changes in accordance with the suggestions made by the members of this House have been incorporated. Therefore more time may be given to the amendments proposed by Hon'ble Members than for general discussion so that the collective wisdom of this House may bring forward a law which is acceptable to all sections of the House.

Sri C. K. RAJAIAH SETTY.—We are commencing the Bill at a late hour. Two hours may be allotted tomorrow for this Bill.

Sri A. V. NARASIMHA REDDY (Bangalore South).—Today we are having about 2½ hours at our disposal; we can discuss this Bill in general for these 2½ hours and we can take up clause by clause discussion tomorrow. I think that can be accepted.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).— ಪ್ಯೂನೂರು ವಿಲೇಜ್ ಪಂಚಾಯತಿ ಬಿಲ್ಲನ್ನು ಇವತ್ತಿನಿಂದ ಮೂರು ದಿನ ತೆಗೆದುಕೊಳ್ಳಬೇಕೆಂದು ಬಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಿರ್ಧಾರವಾಗಿದೆ. ಅದಕ್ಕೊಸ್ಕರ ನಾಳೆ ಮೂರು ಘಂಟೆವರೆಗೆ ಡಿಸ್‌ಕಷನ್, ಮೂರು ಘಂಟೆಯ ಮೇಲೆ ಅಮೆಂಡ್‌ಮೆಂಟ್ ತೆಗೆದುಕೊಳ್ಳ ಬಹುದು.

Sri T. SUBRAMANYA.—I have no objection.

Mr. CHAIRMAN.—If that is so, we will proceed accordingly. I want the opinion of the House on another point: should we impose any time-limit on the duration of speeches? If this is to be done, I shall like it to be done at the beginning itself, so that Members coming later may not say that time-limit has been imposed on their speeches only.

ಶ್ರೀ ಕೆ. ಎಲ್. ನರಸಿಂಹಯ್ಯ (ಹೆಬ್ಬೂರು).— ಇದರಲ್ಲಿ ಮೊದಲೇ ಕೆಲವರಿಗೆ ಹೆಚ್ಚಿಗೆ ಚಾನ್ಸ್ ಸಿಕ್ಕಿದೆ. ಆಗ ಮಾತನಾಡದೆ ಇರತಕ್ಕಂಥವರು ಬಹಳ ಜನ ಇದ್ದಾರೆ. ಚ್ಯೆಮ್ ಲಿಮಿಟ್ ಮಾಡಿದರೆ ಇದು ಸಾಧ್ಯವಾಗುವುದಿಲ್ಲ. ಚ್ಯೆಂ ಲಿಮಿಟ್ ಮಾಡಲೇ ಕೂಡದೆಂದು ನನ್ನ ಅಭಿಪ್ರಾಯ.

Sri A. R. PANCHAGAVI (Gokak-II).—We are now concerned only with the report of the Select Committee. The general principles underlying the Bill have already been extensively discussed. Therefore I think some a time-limit should be laid down in respect of individual speeches.

Sri C. K. RAJAIAH SETTY.—I do not think it is necessary to fix up time limit. We have not done it in the past in respect of Bills. The Chair is there and would regulate the proceedings according to the needs of circumstances.

ಶ್ರೀ ಟಿ. ಎಸ್. ಮೂಡಲಗಿರಿಗೌಡ (ಕುಣಿಗಲ್).— ಚ್ಯೆಂ ಲಿಮಿಟ್ ಹಾಕಲೇಬೇಕು. ಡಿಸ್‌ಕಷನ್ ಎಷ್ಟೇ ಮಾಡಿದರೂಕೂಡ, ಕ್ಲಾಸ್‌ಬೈಕ್ಲಾಸ್ ಕ್ಲಸಿದರ್ ಮಾಡಲೇಬೇಕು; ಹೀಗೆ ಮಾಡಬೇಕಾದುದು ಬಹಳ ಮುಖ್ಯ. ಡಿಸ್‌ಕಷನ್ ವೇಳೆಯಲ್ಲಿ ಚ್ಯೆಂ ಲಿಮಿಟ್ಟನ್ನು ಹಾಕತಕ್ಕಂಥದ್ದು ನರಿ.

Sri C. J. MUCKANNAPPA.—Sir, during the general discussion, many points of doubts would be cleared and possibly many of the amendments may not be moved. I therefore suggest that there be no restriction on time at the stage of general discussion. We will leave it to the good sense of the Chair.

Sri T. SUBRAMANYA.—Sir, I submit that even in discussing this point, we should not spend more time. There has been an acceptance of the general principles underlying this bill by the fact that it has been referred to the Select Committee. I want the Hon'ble Members to ventilate their views when we take the Bill for clause-by-clause discussion so that we may not rush through at the stage of amendments. So far as time-limit on speeches is concerned, the consensus of opinion seems to be that the Chair will use its discretion to allow as many members as possible to give their views.

Mr. CHAIRMAN.—We will now proceed with the debate.

*ಶ್ರೀ ಟಿ. ಸುಬ್ರಹ್ಮಣ್ಯ.—ಸ್ವಾಮಿ, ಈ ಸೆಲೆಕ್ಟ್ ಕಮಿಟಿ ರಿಪೋರ್ಟನ್ನು ತಾವು ಗಮನಕ್ಕೆ ತೆಗೆದುಕೊಳ್ಳುವುದಕ್ಕೆ ಪೂರ್ವಭಾವಿಯಾಗಿ ಒಂದೆರಡು ಮಾತುಗಳನ್ನು ಹೇಳುತ್ತಿದ್ದೇನೆ. ನಾನು ಹೆಚ್ಚಿಗೆ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಮಾನ್ಯ ಸಭಾಸದಸ್ಯರ ಅಭಿಪ್ರಾಯಗಳನ್ನು ಕೇಳಬೇಕೆಂಬ ಕುತೂಹಲ ನನಗಿದೆ,

ವಿಲೇಜ್‌ಪಂಚಾಯತಿ ಮತ್ತು ಲೋಕಲ್‌ಬೋರ್ಡುಗಳ ಬಿಲ್ಲನ್ನು ಸರ್ವಸಮ್ಮತವಾಗಿ, ಹಳ್ಳಿಗಾಡಿನ ಅಭಿವೃದ್ಧಿಗೆ ಅನುಕೂಲವಾಗುವ ರೀತಿಯಲ್ಲಿ ರೂಪಿಸಬೇಕೆಂಬ ಇರಾದೆ ನನಗಿರುವುದರಿಂದ, ಹೆಚ್ಚಿಗೆ ಕಾಲವನ್ನು ತೆಗೆದುಕೊಳ್ಳುವುದಿಲ್ಲ. ಮಾನ್ಯ ಸಭಾಸದಸ್ಯರ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕೆ ಹೆಚ್ಚಿಗೆ ಕಾಲವನ್ನು ಕೊಡಬೇಕೆಂದಿದ್ದೇನೆ.

ಸ್ವಾಮಿ, ಏನು ಕೆಲಸ ಮಾಡಲಿ—ಲ್ಯಾಂಡ್ ರಿಫಾರ್ಮ್ಸ್‌ಆಗಲಿ, ಅಥವಾ ವಿಲೇಜ್ ಪಂಚಾಯತಿಗಳ ಆಕ್ಟ್‌ಆಗಲಿ, ಯಾವುದುಮಾಡಿದರೂ, ಹಳ್ಳಿಗಾಡಿನಲ್ಲಿ ವಾನಮಾಡತಕ್ಕಂಥ ಜನಗಳಿಗೆ ಅದು ಸಹಾಯವಾಗಬೇಕೆಂಬ ಒಂದೇಒಂದು ದೃಷ್ಟಿಯಿಂದ ಕಾನೂನನ್ನು ಮಾಡುವುದಕ್ಕೆ ಪ್ರಾರಂಭಮಾಡಿದ್ದೇವೆ. ದೇಶದ ಬಹುಭಾಗದ ಜನ ಹಳ್ಳಿಗಳಲ್ಲಿ ಜೀವನ ಮಾಡುತ್ತಾ ಇದ್ದಾರೆ. ಅವರಿಗೆ ಹೆಚ್ಚಿಗೆ ಅಧಿಕಾರವನ್ನು ಕೊಟ್ಟು, ಅವರ ಕೆಲಸವನ್ನು ಅವರೇ ಸ್ವಂತವಾಗಿ ಮಾಡಿಕೊಳ್ಳತಕ್ಕ ಜವಾಬ್ದಾರಿಯನ್ನು ಅವರಿಗೆ ವಹಿಸಿವರೆ, ದೇಶದ ಅಭಿವೃದ್ಧಿ ಕೆಲಸ ಚೆನ್ನಾಗಿ ನಡೆಯುತ್ತದೆಂದು ನನ್ನ ಮನೋಭಾವನೆ. ಸಾಮಾನ್ಯವಾಗಿ ಅನೇಕರು ಹೇಳುತ್ತಾರೆ, ಹಳ್ಳಿಗಾಡಿನ ಜನಗಳಿಗೆ ಇಷ್ಟೊಂದು ಅಧಿಕಾರವನ್ನು ಕೊಟ್ಟರೆ, ಅನುಭವವಿಲ್ಲದೆ ಅವರು ಮುಗ್ಗರಿಸಬಹುದೆಂದು. ಹಳ್ಳಿಗಾಡಿನ ಜನಗಳು ಮುಗ್ಗರಿಸಿ, ಎದ್ದು, ಓಡಿ, ಪುನಃ ಮುಗ್ಗರಿಸಿ, ಎದ್ದು, ಓಡಿ ಸಾಕಾದಷ್ಟು ಪರಿಶ್ರಮವನ್ನು ಪಡೆಯುತ್ತಾರೆ. ನುಮ್ಮನೆ ಇರುವುದಕ್ಕಿಂತ, ಈರೀತಿ ಮುಗ್ಗರಿಸಿ, ಬಿದ್ದು, ಎದ್ದು, ಓಡಿ ಅನುಭವ ಪಡೆಯುವುದು ಒಳ್ಳೆಯದೆಂದು ನನ್ನ ಮನಸ್ಸಿಗೆ ಕಾಣುತ್ತಿದೆ. ಅದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಹಳ್ಳಿಗಾಡಿನ ಜನಗಳಿಗೆ ಅಭಿವೃದ್ಧಿ ಕಾರ್ಯ ಒಂದು ಕಾಲದಲ್ಲಿ ಎಲ್ಲಾ ಹಳ್ಳಿಗಳಲ್ಲಿಯೂ, ಒಂದು ವಿಧವಾಗಿ ನಡೆಯಬೇಕಾದರೆ, ಈತರಹ ಒಂದು ನಿಯಮದಿಂದ ಆಗಬೇಕೇ ಹೊರತು, ಬೇರೆ ಯಾವುದರಿಂದಲೂ ಆಗುವಹಾಗೆ ಕಾಣುವುದಿಲ್ಲ. ಡಿಸ್ಟ್ರಿಕ್ಟ್‌ಬೋರ್ಡಿಗಾಗಲಿ, ಸರ್ಕಾರಕ್ಕಾಗಲಿ ಎಲ್ಲಾ ಹಳ್ಳಿಗಳಲ್ಲಿಯೂ, ಒಂದೇಕಾಲದಲ್ಲಿ, ಒಂದೇ ರೀತಿಯಲ್ಲಿ, ಒಂದೇ ತೀವ್ರತೆಯಿಂದ ಕೆಲಸಕಾರ್ಯಗಳನ್ನು ನಡೆಸುವುದು ಸಾಧ್ಯವಾಗುವುದಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿಗೆ ಸಾಧ್ಯವಾಗುವುದಿಲ್ಲವೆನ್ನುವುದು ನನ್ನ ಅಭಿಪ್ರಾಯ. ಎಲ್ಲ ಹಳ್ಳಿ ಜನಗಳಿಗೆ ಕೆಲಸಗಳನ್ನು ಮಾಡಿಕೊಡಬೇಕೆಂಬ ಉದ್ದೇಶವಿದೆಯೋ, ಆಯಾ ಕೆಲಸಗಳನ್ನು ಅವರಿಗೇ ಕೊಡುತ್ತೇವೆ. ಸಾಮಾನ್ಯವಾಗಿ ಹಳ್ಳಿಗಾಡಿನ ಬಹುಭಾಗ ಕೆಲಸವನ್ನು ಹಳ್ಳಿಯ ಜನಗಳಿಗೇ ವಹಿಸುತ್ತಾ ಇದ್ದರೆ ಕೆಲಸದ ಜವಾಬ್ದಾರಿ ಅವರ ಮೇಲೆ ಪೂರ್ಣವಾಗಿ ಬೀಳುತ್ತದೆ. ಇದನ್ನು ಮಾನ್ಯ ಸದಸ್ಯರು ಸ್ವಲ್ಪಮಟ್ಟಿಗೆ ಒಳಹೊಕ್ಕು ವಿಮರ್ಶೆ ಮಾಡಿ, ಒಂದು ತೀರ್ಮಾನಕ್ಕೆ ಬಂದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಇದರಲ್ಲಿ ಇನ್ನೊಂದು ವಿಧಾನವುಂಟು. ಅದೇನೆಂದರೆ, ಹಳ್ಳಿಗಾಡಿನ ಜನಗಳಿಗೆ ಸಾಕಷ್ಟು ಹಣ ಒದಗಿಸುವುದು ಸರ್ಕಾರದ ಕರ್ತವ್ಯ. ಸಾಕಷ್ಟು ಪ್ರಾಜ್ಞರ ಸಹಾಯ ಕೊಡಬೇಕಾದುದೂ ಅವರ ಕರ್ತವ್ಯ. ಈ ಬಿಲ್ಲನ್ನು ತಯಾರುಮಾಡುವಾಗ, ಮಾನ್ಯ ಸದಸ್ಯರು ಏನು ಅಭಿಪ್ರಾಯಪಟ್ಟಿದ್ದಾರೋ, ಅದಕ್ಕೆ ಎಷ್ಟರಮಟ್ಟಿನ ಮನ್ನಣೆ ಸಾಧ್ಯವೋ, ಅಷ್ಟನ್ನೂ ಕೊಟ್ಟಿದ್ದೇವೆ ಎಂದು ಇಲ್ಲಿ ತಿಳಿಸಲು ಬಯಸುತ್ತೇನೆ. ಮಾನ್ಯ ಸದಸ್ಯರೆಲ್ಲರೂ ಇಂಡೈರೆಕ್ಟ್ ಎಲೆಕ್ಷನ್ ಬೇಕಾಗಿಲ್ಲ, ಡೈರೆಕ್ಟ್ ಎಲೆಕ್ಷನ್ ಬೇಕೆಂದು ಹೇಳಿದ್ದಾರೆ. ಅದಕ್ಕೆ ಮನ್ನಣೆ ಕೊಟ್ಟು ತಾಲ್ಲೂಕು ಬೋರ್ಡುಗಳಿಗೆ ಡೈರೆಕ್ಟ್ ಎಲೆಕ್ಷನ್ ಇರಬೇಕೆಂದೆನ್ನುವುದನ್ನು ಒಪ್ಪಿ ಸೆಲೆಕ್ಟ್ ಕಮಿಟಿಯಲ್ಲಿ ತೀರ್ಮಾನ ಮಾಡಿದ್ದಾರೆ. ಅದೂ ಅಲ್ಲದೆ, ಅಪೀಲುಗಳೆಲ್ಲವನ್ನೂ ಡೆಪ್ಯುಟಿ ಕಮಿಷನರಿಗೆ ಕೊಡುವುದಕ್ಕೆ ಬದಲಾಗಿ ಮುಖ್ಯ ಸೀಫ್ ಕೋರ್ಟಿಗೆ ಕೊಡಬೇಕೆಂದು ಬಹುಭಾಗದ ಮಾನ್ಯ ಸದಸ್ಯರ ಅಭಿಪ್ರಾಯವಿರುವುದರಿಂದ, ಅದಕ್ಕೆ ಮನ್ನಣೆಕೊಡುತ್ತೇವೆ. ಇನ್ನು ಕೆಲವು ಮಾನ್ಯ ಸದಸ್ಯರು ಈಗ ಒದಗಿಸಿರತಕ್ಕಂಥ ಹಣ ಸಾಲದು ಎಂದು ಹೇಳಿದರೂ ಜಾಸ್ತಿ ಹಣ ಕೊಡುವ ಒಂದು ಅಭಿಪ್ರಾಯವಿದೆ. ಈಗ ಒದಗಿಸಿರತಕ್ಕಂಥ ಹಣವನ್ನು ವಿಭಜನೆಮಾಡುವ ರೀತಿಯಲ್ಲಿ ಸ್ವಲ್ಪ ವ್ಯತ್ಯಾಸಮಾಡುವುದು ಒಳ್ಳೆಯದೆಂದು ಕೆಲವರಿಗೆ ಅಭಿಪ್ರಾಯ ಇದೆ. ಒಂದೊಂದು ತಾಲ್ಲೂಕುಬೋರ್ಡಿಗೆ, ತಾಲ್ಲೂಕಿನಲ್ಲಿರತಕ್ಕಂಥ ಕಂದಾಯದಲ್ಲಿ 100ಕ್ಕೆ 25ರಂತೆ ಕೊಟ್ಟರೆ, ಕೆಲವು ತಾಲ್ಲೂಕುಗಳಿಗೆ ಬಹಳ ಹೆಚ್ಚಿಗೆ ಬರುತ್ತದೆ, ಕೆಲವು ತಾಲ್ಲೂಕುಗಳಿಗೆ ಕಡಮೆ ಬರುತ್ತದೆ. ಕುಷ್ಟಿಗಿ ತಾಲ್ಲೂಕು ತೆಗೆದುಕೊಂಡರೆ, ಅದಕ್ಕೆ 37 ಸಾವಿರ ರೂಪಾಯಿವರೆಗೆ ಬರುತ್ತದೆ. ಇನ್ನೊಂದು ತಾಲ್ಲೂಕಿನವರಿಗೆ 69 ಸಾವಿರ ರೂಪಾಯಿ ಬರುತ್ತದೆ. ವಿಸ್ತೀರ್ಣ ನೋಡಿದರೆ ಕುಷ್ಟಿಗಿ ತಾಲ್ಲೂಕಿಗಿಂತಲೂ ಇನ್ನೊಂದು ತಾಲ್ಲೂಕು ಚಿಕ್ಕದಾಗಿರುತ್ತದೆ. ಕೂಡ್ಲಿಗಿ ಜನಸಂಖ್ಯೆಯಲ್ಲಿ ಜಾಸ್ತಿ ಇರುತ್ತದೆ. ಆದ್ದರಿಂದ ಕಂದಾಯ ಹಾಕುವಾಗ ನೀರಾವರಿ ಕೆಲಸಗಳು ಯಾವ ತಾಲ್ಲೂಕಿನಲ್ಲಿ ಜಾಸ್ತಿ ನಡೆದಿದೆಯೋ ಅಲ್ಲಿ ದುಡ್ಡು ಜಾಸ್ತಿ ಸಿಕ್ಕುತ್ತದೆ. ಬಾಕಿ ತಾಲ್ಲೂಕ್‌ಗಳಿಗೆ ತೊಂದರೆಯಾಗುತ್ತದೆ. ಆದರೆ ಅವರಿಗೆ ಸಾಕಾದಷ್ಟು ಸೌಕರ್ಯ ದೊರಕುವುದಿಲ್ಲ. ಸಿಬ್ಬಂದಿ ಖರ್ಚಿಗೇ ಈ ದುಡ್ಡನ್ನು ಬಹಳವಾಗಿ ತೆಗೆದುಕೊಂಡು ಹೋಗುತ್ತಿದ್ದಾರೆ. ಅದರಲ್ಲಿ ಹಂಚತಕ್ಕ ವಿಧದಲ್ಲಿ ಪರಿವರ್ತನೆಮಾಡಿ ಬೇರೆ ರೂಪ ಕೊಡಬೇಕೆಂದು ಮ ನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ. ಅದನ್ನು ಕೂಡ ವಿಮರ್ಶೆ ಮಾಡಬಹುದು ಎಂದು ನಾನು ಹೇಳುತ್ತೇನೆ. ಒಂದಕ್ಕೆ ನಾಲ್ಕಾಣೆಯಂತೆ ಶೇಕಡಾ 25 ಇರುವುದನ್ನು ಈಗ ಶೇಕಡಾ 30 ಅಥವಾ ಶೇಕಡಾ 35 ಮಾಡಬೇಕೆಂದು ಸದಸ್ಯರು ಸಲಹೆ ಮಾಡಿದ್ದಾರೆ. ಇದನ್ನು ವಿಮರ್ಶೆ ಮಾಡಬಹುದು. ಫೈನಾನ್ಸ್ ಇಲಾಖೆಯೊಡನೆ ಮಾತನಾಡಿ ಒಳ್ಳೆ ಒಳ್ಳೆಯ ಡೆವಲಪ್‌ಮೆಂಟ್ ವರ್ಕ್‌ಗಳನ್ನು ತೆಗೆದುಕೊಂಡಿದ್ದೇವೆ. ಅದಕ್ಕೆ ಯಾವ ವಿಧವಾದ ಅಡ್ಡಿಯೂ ಬಾರದ ರೀತಿಯಲ್ಲಿ ಎಷ್ಟು ಹಣ ಒದಗಿಸುವುದಕ್ಕೆ ಸಾಧ್ಯವೋ ಅಷ್ಟನ್ನೂ ಒದಗಿಸಿದ್ದಾರೆ. ಪ್ರಾಧಾನ್ಯತೆ ಸಲಹೆಗಳನ್ನು ತೆಗೆದುಕೊಂಡು ಕೊನೆಯಲ್ಲಿ ತಿದ್ದುಪಡಿ ಬಂದಾಗ್ಗೆ ನಾನು ಪ್ರಸ್ತಾಪ ಮಾಡುತ್ತೇನೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರಲ್ಲಿ ಅತಿಮುಖ್ಯ ವಿಷಯ, ಹರಿಜನರಿಗೆ ಕೆಲವು ಸ್ಥಾನಗಳನ್ನು ಮೀಸಲಾಗಿಟ್ಟಿವೆ. ಆ ಸ್ಥಾನಗಳನ್ನು ಮೀಸಲಾಗಿಡುವಾಗ ವಿಲೇಜ್ ಪಂಚಾಯಿತಿಯಲ್ಲಿರತಕ್ಕ ಮತ್ತು ವಿಲೇಜ್ ಪಂಚಾಯಿತಿ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರತಕ್ಕ ಹರಿಜನಸಂಖ್ಯೆಗನುಗುಣ

(ಶ್ರೀ ಟಿ. ಸುಬ್ರಹ್ಮಣ್ಯ)

ವಾಗಿ ನಿರ್ಧಾರಮಾಡಿದೆ. ಕೆಲವು ವಿಲೇಜ್ ಪಂಚಾಯಿತಿಯಲ್ಲಿ ಹರಿಜನರು ಅಲ್ಪಸ್ವಲ್ಪ ಇದ್ದಾರೆ. ಅಂತಹ ಕಡೆ ರಿಜರ್ವ್ ಬೇಕಾಗಿರುವುದಿಲ್ಲ. ಹೆಚ್ಚಿಗೆ ಅಂತಹ ಜನ ಇದ್ದರೆ ಆಗ ಅವರ ಸಂಖ್ಯೆಗನುಗುಣವಾಗಿ ಮಾನಲಾಗಿಡಬೇಕೆಂದು ಇಲ್ಲಿ ಹೇಳಿದೆ. ಹೆಂಗಸರಿಗೆ ಪೂರ್ವದಲ್ಲಿ ಅವರ ಸ್ಥಾನಗಳ ಬಗ್ಗೆ ಚರ್ಚೆ ಮಾಡಿದಾಗ ಮೊದಲೇ ಕಾದಿಟ್ಟಿರಲಿಲ್ಲ. ಈಗ ಪ್ರತಿಯೊಂದು ವಿಲೇಜ್ ಪಂಚಾಯಿತಿಯಲ್ಲೂ ಇಬ್ಬರು ಹೆಣ್ಣುಮಕ್ಕಳಿಗೆ ಜಾಗ ಇರಬೇಕೆಂದು ತಿದ್ದುಪಡಿ ಮಾಡಿದೆ. ಡೆಪ್ಯುಟಿ ಕಮಿಷನರಿಗೆ ಇರುವ ಅಧಿಕಾರ ಬಹಳ ಜಾಸ್ತಿ. ಅವರು ಅಷ್ಟೊಂದು ಕೆಲಸ ಮಾಡುವುದಕ್ಕಾಗುವುದಿಲ್ಲ. ಎಲ್ಲಾ ಕೆಲಸಗಳನ್ನೂ ತೆಗೆದುಕೊಂಡು ಹೋಗಿ ಡೆಪ್ಯುಟಿ ಕಮಿಷನರಿಗೆ ಕೊಡುತ್ತೀರಿ, ಸರ್ವಶಕ್ತನಾದ ಮನುಷ್ಯನೆಂದು ಅಷ್ಟೊಂದು ಕೆಲಸವನ್ನು ಕೊಡಬಾರದು, ಸ್ವಲ್ಪ ಕಡಮೆ ಕೆಲಸಗಳನ್ನು ಅವರಿಗೆ ವಹಿಸಬೇಕೆಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಕ್ಕೆ ಸರ್ಕಾರದವರು ಗಮನ ಕೊಟ್ಟು ಎಲ್ಲೆಲ್ಲಿ ಅವರ ಅಧಿಕಾರದಲ್ಲಿ ಕಡಮೆ ಮಾಡುವುದಕ್ಕೆ ಸಾಧ್ಯವೋ ಅಲ್ಲಲ್ಲಿ ಕಡಮೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆಂದು ನಾನು ಹೇಳುತ್ತೇನೆ. ಅದರಲ್ಲಿ ಒಂದು ಮುಖ್ಯವಾದ ಪ್ರಶ್ನೆ ಬರುತ್ತದೆ. ಅನೇಕ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಸ್ಕೂಲುಗಳ ವಿದ್ಯಾಭ್ಯಾಸದ ಖರ್ಚು ತಗಲುತ್ತಿದೆ. ಅದಕ್ಕೆ ಏನು ಮಾಡಬೇಕೆಂಬುದನ್ನು ಯೋಚನೆ ಮಾಡಿದರೆ ಪ್ರೈಮರಿ ಎಜುಕೇಷನ್ ಜವಾಬ್ದಾರಿ ಸಾಮಾನ್ಯವಾಗಿ ಸರ್ಕಾರದ್ದಾಗಿರುತ್ತದೆ. ಆ ತತ್ವವನ್ನೇ ಪೂರ್ಣವಾಗಿ ಇಟ್ಟುಕೊಂಡು ಪ್ರಾಥಮಿಕ ವಿದ್ಯಾಭ್ಯಾಸ ಪೂರ್ಣವಾದ ಜವಾಬ್ದಾರಿಯನ್ನು ಸರ್ಕಾರ ಹೊರಬೇಕಾದುದು ಅನಿವಾರ್ಯ. ಅದಕ್ಕೋಸ್ಕರವೇ ವಿದ್ಯಾ ಇಲಾಖೆಯವರು ಪ್ರಾಥಮಿಕ ವಿದ್ಯಾಭ್ಯಾಸ ಯಾವರೀತಿ ಇರಬೇಕು ಅದರ ಖರ್ಚು ವರ್ಗೈರೆ ಯಾವರೀತಿ ಮಾಡಬೇಕೆಂಬ ಬಗ್ಗೆ ಒಂದು ಮಸೂದೆಯನ್ನು ಇಷ್ಟರಲ್ಲೇ ತರುವವರಾಗಿದ್ದಾರೆ. ಅದುವರೆಗೆ ಈಗಿರುವ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗಬೇಕು. ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಆ ಜವಾಬ್ದಾರಿಯನ್ನು ಯಾರ ಯಾರ ಮೇಲೆ ಹಂಚಬೇಕೋ ಆ ಅಧಿಕಾರವನ್ನು ಮಾತ್ರ ಸರ್ಕಾರದವರು ತೆಗೆದುಕೊಂಡು ಈಗಿರುವಂತೆ ಸ್ವಲ್ಪ ದಿವಸಗಳ ಮಟ್ಟಿಗಾದರೂ ಅವರು ಅನುಸರಿಸಿಕೊಂಡು ಹೋಗುತ್ತಾರೆಂದು ನಾನು ತಿಳಿಯುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ).—ಕೆಲವು ಡಿಸ್ಟ್ರಿಕ್ಟ್ ಬೋರ್ಡುಗಳೇ ಹೈಸ್ಕೂಲುಗಳನ್ನು ನೋಡಿಕೊಳ್ಳುತ್ತಿದ್ದಾರೆ. ಅಂತಹವರಿಗೆ ಏನು ಮಾಡಿದ್ದೀರಿ?

ಶ್ರೀ ಟಿ. ಸುಬ್ರಹ್ಮಣ್ಯ.—ಆ ವಿಷಯ ಮೊದಲೇ ಹೇಳಿದ್ದೇನೆ. ಯಾವ ತಾಲ್ಲೂಕಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲು ಇದೆಯೋ ಅದನ್ನು ಆಯಾ ತಾಲ್ಲೂಕ್ ಬೋರ್ಡಿನವರಿಗೆ ವಹಿಸಿ ಮುಂದೆ ಏನು ಮಾಡಬೇಕೆಂಬುದನ್ನು ಪೂರ್ತಿಯಾಗಿ ತೀರ್ಮಾನ ಮಾಡುವವರೆಗೂ ಸ್ಕೂಲುಗಳಿಗೆ ಆಗತಕ್ಕ ಖರ್ಚನ್ನು ಯಾವಯಾವ ತಾಲ್ಲೂಕಿಗೆ ಯಾವರೀತಿ ಹಣ ಹಂಚಿಕೆಯಾಗಬೇಕೋ ಆ ಅಧಿಕಾರವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ನನ್ನ ಅಭಿಪ್ರಾಯ ಸರ್ಕಾರದ ಅಭಿಪ್ರಾಯವಲ್ಲ. ಈ ಹೊರೆಯನ್ನು ಅವರಿಗೆ ಕಡಮೆ ಮಾಡಬೇಕು. ಈಗಾಗಲೇ ಅವರಿಗೆ ಸಹಾಯ ಮಾಡುತ್ತಿದ್ದೇವೆ. ಅದನ್ನು ಜಾಸ್ತಿ ಮಾಡಬೇಕೋ ಏನೋ ಎಂದು ನನ್ನ ಅಭಿಪ್ರಾಯದಲ್ಲಿ ಕಂಡು ಬರುತ್ತಿದೆ. ಅದನ್ನು ಸರ್ಕಾರ ಯಾವರೀತಿ ತೆಗೆದುಕೊಳ್ಳುತ್ತಾರೋ ಗೊತ್ತಿಲ್ಲ.

ಶ್ರೀ ಎಂ. ಪಾಟೀಲ್ (ಹಡಗಲ್ಲಿ).—ಬಳ್ಳಾರಿಯಲ್ಲಿ ವಿಶೇಷವಾಗಿ ಪ್ರೈಮರಿ ಸ್ಕೂಲುಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನವರೇ ನೋಡುತ್ತಿದ್ದಾರೆ.

ಶ್ರೀ ಟಿ. ಸುಬ್ರಹ್ಮಣ್ಯ.—ಪ್ರೈಮರಿ ವಿದ್ಯಾಭ್ಯಾಸವನ್ನೆಲ್ಲಾ ಸರ್ಕಾರವೇ ವಹಿಸಬೇಕೆಂದು ನನ್ನ ವಾದ. ಇದನ್ನು ಪೂರ್ತಿಯಾಗಿ ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ಮುಂಚೆ ಮಧ್ಯಭಾಗದಲ್ಲಿ ಇದರ ವ್ಯವಸ್ಥೆ ಹೇಗಿರಬೇಕು? ಈಗಿರುವ ವ್ಯವಸ್ಥೆ ಮೇರೆಗೆ ಸ್ಥಳೀಯ ಸಂಸ್ಥೆಗಳ ಮೂಲಕವೇ ಇವು ನಡೆಯಬೇಕು. ಹಣದ ಜವಾಬ್ದಾರಿ ವಿಷಯದಲ್ಲಿ ಸರ್ಕಾರದವರು ನೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಅದರಲ್ಲಿ ಇದೆ. ಅದನ್ನು ಯಾವರೀತಿ ಮಾಡಬೇಕೆಂಬುದನ್ನು ಸರ್ಕಾರದವರು ಪರ್ಯಾಲೋಚನೆ ಮಾಡುತ್ತಿದ್ದಾರೆಂದು ತಮಗೆ ತಿಳಿಸುತ್ತಿದ್ದೇನೆ. ಇಷ್ಟು ಮಾತನ್ನು ತಮಗೆ ತಿಳಿಸಿ, ಇದೆಲ್ಲ ವಿಷಯವನ್ನು ತಮ್ಮ ಗಮನಕ್ಕೆ ತಂದು ಪ್ರತಿಯೊಂದು ಕಲಮನ್ನು ವಿಶದವಾಗಿ ಪರಿಶೀಲನೆಮಾಡಿ ಎಲ್ಲರಿಗೂ ಒಪ್ಪಿಗೆಯಾದಂಥ ಕಾನೂನುಮಾಡಿ ಈ ದೇಶದ ಕಲ್ಯಾಣ ಆದಷ್ಟು ಜಾಗ್ರತೆ ಆಗುವುದಕ್ಕೆ ಸಹಕಾರಿಯಾಗುವ ರೀತಿಯಲ್ಲಿ ಇದಕ್ಕೆ ತಮ್ಮೆಲ್ಲರ ಅಂಗೀಕಾರವನ್ನು ಕೊಡಬೇಕೆಂದು ಭಿನ್ನಹ ಮಾಡುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದೆ ಒಂದು ಮಹತ್ವವಾದಂಥ ಬಿಲ್ಲನ್ನು ವಿಮರ್ಶೆ ಮಾಡಬೇಕೆಂದು ಇಡಲಾಗಿದೆ. ಇದರಲ್ಲಿ ಮುಖ್ಯವಾಗಿ ನಮ್ಮ ದೇಶದ ಶೇಕಡಾ 75 ಭಾಗದಷ್ಟು ಇರತಕ್ಕ ಗ್ರಾಮಾಂತರವಾಸಿಗಳ ಪ್ರಶ್ನೆ ಇದೆ. ಅವರಿಗೆ ಸೌಕರ್ಯಗಳನ್ನು ಒದಗಿಸುವುದರಲ್ಲಿ ಈ ಬಿಲ್ಲಿನಲ್ಲಿ ಒಂದು ವಿಶೇಷ ಮಹತ್ವ ಅಡಗಿದೆ. ನಿಜವಾಗಿ ನೋಡಿದರೆ, ಸರ್ಕಾರದವರು ಇದನ್ನು ಯಾವಾಗಲೋ ಈ ಸಭೆಯ ಮುಂದೆ ತರಬೇಕಾಗಿತ್ತು. ಕಳೆದ ನಾಲ್ಕೈದು ವರ್ಷಗಳಿಂದ ಈ ಸಭೆಯಲ್ಲಿ ಅನೇಕಸಾರಿ ಈ ಬಗ್ಗೆ ಒತ್ತಾಯ ಮಾಡಿದ್ದೇವೆ. ಈಗ ಈ ಬಿಲ್ಲನ್ನು ಸರ್ಕಾರದವರು ತಂದಿದ್ದಾರೆ. ಇದನ್ನು ತರುವುದಕ್ಕೆ ಹಿಂದೆ ಒಂದು ಬಿಲ್ ನಮ್ಮ ಮುಂದೆ ಬಂದು ಪಾಸ್ ಆಗಿದ್ದರೂ ಅದರಲ್ಲಿರುವ ಯಾವ ಅಂಶವನ್ನೂ ಜಾರಿಗೆ ಕೊಡದೆ, ಅದು ಆಕ್ಟ್ ಆಗಿದ್ದರೂ ಸಾಧಾರಣ ಆಕ್ಟಾಗಿ ಉಳಿಯಿತು. ಅದರಲ್ಲಿ ಶೇಕಡಾ 12½ ಭಾಗದಷ್ಟು ಪಂಚಾಯಿತಿಗೆ ಜಮಾ ಮಾಡಬೇಕೆಂದು ಹೇಳಿದ್ದರೂ ಅದರಲ್ಲಿ ಒಂದು ಕಾನು ಕೂಡ ಅವರಿಗೆ ಇದುವರೆಗೂ ಅಲಾಟ್ ನಾರ್ಎಲ್ಲ. ಇನ್ನು ಎಲೆಕ್ಷನ್ ಶೀಘ್ರವಾಗಿ ನಡೆಸುತ್ತೇವೆಂದು ಹೇಳಿದ್ದರು. ಅದನ್ನೂ ಮಾಡಲಲ್ಲ. ಈ ತರಹ ಕೆಟ್ಟ ಕನಸು ಪುನಃ ಕಾಣದೇ ಇರಲಿ ಎಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಈಗ ಹಳ್ಳಿಯ ಜನರಿಗೆ ಒಂದು ಅಳ್ಳಿಕೆ, ಗ್ರಾಮಾಡಳಿತ ಬಹಳ ಮುಖ್ಯವಾದುವು. ಇದರಲ್ಲಿ ಪಟ್ಟಣವಾಸಿಗಳ ಮತ್ತು ನಗರವಾಸಿಗಳ ಒಂದು ಜೀವನ ಮಟ್ಟವನ್ನು ಮತ್ತು ಹಳ್ಳಿಯವರ ಜೀವನ ಮಟ್ಟವನ್ನು ಹೋಲಿಸಿ ನೋಡಿದರೆ ಬೆಂಗಳೂರು, ದಾವಣಗೆರೆ, ಮೈಸೂರು ವಗೈರೆ ಪಟ್ಟಣಗಳಲ್ಲಿ ವಾಸಮಾಡುವ ಜನತೆಗೆ ತಲಾ ಒಂದಕ್ಕೆ 15-20 ರೂಪಾಯಿ ಪರ್‌ಕ್ಯಾಪಿಟಾ ಎಕ್ಸ್‌ಪೆಂಡಿಚರ್ ಆಗುತ್ತದೆ. ಅದೇ ರೀತಿ ತಿಪಟೂರು, ತುಮಕೂರು ನಗರಗಳನ್ನು ಹೋಲಿಸಿದರೆ ಅಲ್ಲಿಯೂ ಕೂಡ 10-15 ರೂಪಾಯಿ ಆಗುತ್ತದೆ. ಇನ್ನು

ಕೆಲವು ಕಡೆಗಳಲ್ಲಿ 5-10 ರೂಪಾಯಿಗಳು ಮಾತ್ರ ಪರ್‌ಕ್ಯಾಪಿಟ್ ಎಕ್ಸ್‌ಪೆಂಡಿಚರ್ ಆಗುತ್ತದೆ. ಇವತ್ತು ನಾವು ಹಳ್ಳಿಯವಾಸಿಗಳಿಂದ ಅನೇಕ ಬಾಬುಗಳಿಂದ ಬರತಕ್ಕ ಹಣವನ್ನೆಲ್ಲಾ ಕೂಡಿಸಿದರೂ ಈಗಿರತಕ್ಕ ಐದು ಕೋಟಿ ಜನಸಂಖ್ಯೆಗೇನೂ ಸಾಲುವುದಿಲ್ಲ. ನಿಮ್ಮ ಒಂದೂವರೆ ಕೋಟಿ ಹಣದಲ್ಲಿ ಐದು ಕೋಟಿ ಜನಸಂಖ್ಯೆಗೇನಾಗುತ್ತದೆ? ಅದನ್ನು ಮೂರು ಭಾಗವಾಗಿ ವಿಂಗಡಿಸುತ್ತೀರಿ, ಪಂಚಾಯಿತಿ, ತಾಲ್ಲೂಕ್ ಬೋರ್ಡ್ ಮತ್ತು ಡಿಸ್ಟ್ರಿಕ್ಟ್ ಅಡ್ವೈಜರಿ ಕೌನ್ಸಿಲ್ ಎಂದು. ಉದಾಹರಣೆಗೆ ನೀರವಾಗಿ ಪಂಚಾಯಿತಿ ವಿಷಯವನ್ನೇ ಪರಿಶೀಲಿಸಿ ನೋಡುವುದಾದರೆ, ಅಲ್ಲಿ ಕೇವಲ ಎಂಟು ಆಣೆಯಿಂದ ಎರಡು ರೂಪಾಯಿಗಳವರೆಗೆ ತಲಾ ಒಂದಕ್ಕೆ ಖರ್ಚಾಗುತ್ತದೆ. ಈ ರೀತಿಯಾಗಿ ಎಂಟು ಆಣೆ, ಒಂದೂವರೆ, ಎರಡು ರೂಪಾಯಿಗಳು ತಲಾ ಒಂದಕ್ಕೆ ಅಲ್ಲಿ ಖರ್ಚಾದರೆ, ಹಳ್ಳಿಯ ಜನಸಂಖ್ಯೆಗೆ ಸೌಕರ್ಯಗಳನ್ನು ಒದಗಿಸುವುದಕ್ಕೆ ಸಾಧ್ಯವೇ ಎಂಬುದು ಒಂದು ಪ್ರಶ್ನೆ. ಹಳ್ಳಿಗಳಲ್ಲಿ ಜಮಾ ಬಂದುದನ್ನು ಲೆಕ್ಕಾಚಾರ ಹಾಕಿಕೊಂಡರೆ ನುಮಾರು ಒಂದು ಕೋಟಿಯಾಗಬಹುದು. ಸರ್ಕಾರದವರು ಗ್ರಾಂಟು ರೂಪವಾಗಿ ಸಹಾಯ ಧನವನ್ನು ಒಂದೂವರೆಕೋಟಿ ಕೊಡಬಹುದು. ಹೊಸ ತೆರಿಗೆಗಳನ್ನೆಲ್ಲಾ ಕೂಡಿಸಿದರೆ ಅದು ಒಂದು ಕೋಟಿ ಆಗಬಹುದು. ಈಗ ಆದ ನ್ನೆಲ್ಲಾ ಒಟ್ಟು ಸೇರಿಸಿದರೆ ಕೇವಲ ಮೂರೂವರೆ ನಾಲ್ಕು ಕೋಟಿ ಕೂಡ ಆಗುವುದಿಲ್ಲ. ಒಂದೂವರೆ ಕೋಟಿ ಜನಸಂಖ್ಯೆಗೆ ಕೇವಲ ಮೂರೂವರೆ ನಾಲ್ಕು ಕೋಟಿ ಉತ್ಪತ್ತಿ ಬಂದರೆ ಹೇಗೆ? ಇದರಿಂದ ಸರ್ಕಾರ ಏನು ಜನತೆಯ ಮತ್ತು ದೇಶದ ಕಲ್ಯಾಣ ಮಾಡಬೇಕೆಂದಿದೆಯೋ ಅದು ಖಂಡಿತ ಸಾಧ್ಯವಾಗುವುದಿಲ್ಲವೆಂದು ನನಗನ್ನಿಸುತ್ತದೆ. ಅದಲ್ಲದೆ ಈ ಕಾನೂನಿನಲ್ಲಿ ಏನೇನೋ ಸೌಲಭ್ಯಗಳನ್ನು ಅವರಿಗೆ ಕಲ್ಪಿಸಿಕೊಡಬೇಕೆಂದು ಅಧಿಕಾರ ಕೊಟ್ಟಿದ್ದಾರೆ. ಆ ರೀತಿ ಅಧಿಕಾರ ಕೊಡುವಾಗ ಹಣ ಸಾಕಷ್ಟು ಇಲ್ಲದಿದ್ದರೆ ಏನು ಪ್ರಯೋಜನ? ಇವತ್ತಿನ ದಿವಸ ಪಂಚಾಯಿತಿಯವರು ಇಂಥಿಂಥ ಅಬ್ಲಿಗೇಟರಿ ವರ್ಕ್ಸ್ ಮತ್ತು ಇಂಥಿಂಥ ಡಿಸ್ಕ್ರಿಷನರಿ ವರ್ಕ್ಸ್ ಮೊಟ್ಟಮೊದಲು ಹಳ್ಳಿಗಳಲ್ಲಿ ಮಾಡಬೇಕೆಂದು ಈ ಬಿಲ್ಲಿನಲ್ಲಿ ಹೇಳಿದ್ದಾರೆ. ಪಂಚಾಯಿತಿಯವರ ಒಂದು ಅಭಿಪ್ರಾಯದ ಮೇರೆಗೆ ಹಣ ಸಾಕಷ್ಟು ಅವರಿಗೆ ಒದಗಿದರೆ ಆಗ ಮಾತ್ರ ಅಂಥಿಂಥ ಕೆಲಸಗಳನ್ನು ಮಾಡಬಹುದು. ಈಗ ಅವರಿಗೆ ವಹಿಸಿರತಕ್ಕ ಆ ಎರಡುತರಹ ಕೆಲಸಗಳನ್ನೆಲ್ಲಾ ಒಟ್ಟುಗೂಡಿಸಿದರೆ ನುಮಾರು 40-45 ಐಟಮ್ಸ್ ಆಗುತ್ತವೆ.

4 P.M.

ಹೀಗೆ ತಾಲ್ಲೂಕಿನ ಒಂದು ಜವಾಬ್ದಾರಿ ತೆಗೆದು ಕೊಳ್ಳತಕ್ಕ ಬಗ್ಗೆ ಸರ್ಕಾರದವರು ಕೊಡತಕ್ಕ ಹಣ ಏತಕ್ಕೂಸಾಲದು. ಈಗ ಸರ್ಕಾರದವರು ಆ ಬಿಜಾಪುರ, ಬೆಳಗಾಂ ಇತ್ಯಾದಿ ನಾಲ್ಕು ಜಿಲ್ಲೆಗಳಿಗೆ ಏನು ಒಂದು ಕಾಂಪ್ಲಿಮೆಂಟ್ ಕೊಡುತ್ತೇವೆಂದು ಹೇಳುತ್ತಿದ್ದಾರೋ ಅದನ್ನು ಅವರು ಈ ದಿವಸ ಅಲ್ಲಿ ಕೆಲಸಕ್ಕೆ ನೇಮಿಸಿಕೊಂಡಿರತಕ್ಕ ಆ ಕಾರ್ಯದರ್ಶಿಗಳಿಗೆ ಸಂಬಳಕ್ಕೆ ಸರಿಹೋಗಿದೆಯೆಂದು ಅಲ್ಲಯವರೇ ಹೇಳುತ್ತಿದ್ದಾರೆ. ಹೀಗೇ ಹತ್ತೊಂಭತ್ತು ಜಿಲ್ಲೆಗಳಿಗೂ 19 ಜನ ಪ್ಲೈಡ್ ಸೆಕ್ರೆಟರಿಗಳನ್ನು ಇಟ್ಟುಕೊಂಡರೆ ಸರ್ಕಾರದವರು ಕೊಡತಕ್ಕ ಸಹಾಯವೇನಿದೆಯೋ ಅದು ಆ ಸೆಕ್ರೆಟರಿಗಳ ಸಂಬಳಕ್ಕೆ ಸರಿಹೋಗಬಹುದು, ಅಷ್ಟೆ; ಆದರೆ ಆ ಸಿಬ್ಬಂದಿವರ್ಗ ಆ ಸೆಕ್ರೆಟರಿಗಳೊಬ್ಬರಿಗೆ ಮುಗಿಯಲಲ್ಲ, ಅವರ ಜೊತೆಗೆ ಒಂದೊಂದು ಸರ್ಕಲ್‌ಗೆ ಕನಿಷ್ಠಪಕ್ಷ ಒಬ್ಬ ಸಬ್-ಓವರ್‌ಸೀಯರಿರಬೇಕಾಗುತ್ತದೆ, ಒಬ್ಬ ಹೆಲ್ತ್ ಇನ್‌ಸ್ಪೆಕ್ಟರ್ ಇರಬೇಕಾಗುತ್ತದೆ, ಇನ್ನೂ ನಾಲ್ಕಾರುಜನ ಗುಮಾಸ್ತರುಗಳೂ ಇತರ ಸಿಬ್ಬಂದಿ ವರ್ಗ ಹೀಗೆಲ್ಲಾ ಇರಬೇಕಾಗುತ್ತದೆ. ಇಷ್ಟು ಸಿಬ್ಬಂದಿಯನ್ನೆಲ್ಲ ನಡೆಸಿಕೊಂಡು ಹೋಗಬೇಕಾಗಿದ್ದರೆ ಎಲ್ಲಾ ಮೂಲಗಳಿಂದಲೂ ಎಷ್ಟೆಷ್ಟು ಹಣಬರುತ್ತದೋ ಆ ಹಣವನ್ನೆಲ್ಲವನ್ನೂ ಲೆಕ್ಕಹಾಕಿದಾಗ್ಗೂ ಆ ಸಿಬ್ಬಂದಿಗೆ ಆಗತಕ್ಕ ಖರ್ಚುಗಳಿಗಾದರೂ ಸರಿದೂಗಿಸಲು ಸಾಧ್ಯವಾಗುವುದೋ ಇಲ್ಲವೋ ಎನ್ನುತಕ್ಕಂಥ ಭಯ ಉಂಟಾಗಿದೆ. ಈ ದಿವಸ ಒಂದೊಂದು ಪೌರನಭೆಯವರು ತಾವು ನಡೆಸುತ್ತಿರುವ ಒಂದೊಂದು ಹೈಸ್ಕೂಲಿನ ಖರ್ಚುವೆಚ್ಚಗಳನ್ನೇ ತಡೆದುಕೊಳ್ಳಲು ಸಾಧ್ಯವಿಲ್ಲದೆ ಅವು ಪಾಪರಾಗತಕ್ಕ ಪರಿಸ್ಥಿತಿಗಿಳಿದಿವೆ. ಜೊತೆಗೆ ಈ ದಿವಸ ಜನಜೀವನಕ್ಕೆ ಅತ್ಯವಶ್ಯಕವಾದ ದವನಧಾನ್ಯಗಳ ಬೆಲೆ ಗಂಟೆ ಗಂಟೆಗೂ ಏರುತ್ತಿರುವ ಕಾಲದಲ್ಲಿ ಸರ್ಕಾರದವರು ಇಂಥ ಒಂದು ಬಿಲ್ಲನ್ನು ತಂದಿರುತ್ತಾರೆ! ಆದರೆ ನೋಡುವುದಕ್ಕೂ ಮತ್ತು ಓದುವುದಕ್ಕೂ ಈಬಿಲ್ಲೇನೋಬಹಳ ಹಿತವಾಗಿಯೇ ಇದೆ ಆದರೆ ಇದರಲ್ಲಿರತಕ್ಕ ಕಲಂಗಳನ್ನು ಮಾತ್ರ ಜಾರಿಗೆ ಕೊಡಲು ಸಾಧ್ಯವೇಇಲ್ಲ. ಈ ದಿವಸ ಸರ್ಕಾರದವರು ಕೊಡತಕ್ಕ ಆ ಶೇಕಡ 20ರ ಪ್ರಕಾರ ಲೆಕ್ಕಹಾಕಿದರೆ ಸರ್ಕಾರದಿಂದ ಈ ನಂಸ್ಥೆಗಳಿಗೆ ದೊರೆಯತಕ್ಕ ಒಟ್ಟು ಹಣ ನುಮಾರು ಒಂದೂವರೆ ಅಥವ ಎರಡು ಲಕ್ಷ ರೂಪಾಯಿಗಳಾಗಬಹುದು. ಇದನ್ನೇ ನಾವು ತಲೆಯೊಂದಕ್ಕೆ ನಗರವಾಸಿಗಳಿಗೆ ಬೀಳುತ್ತಿರುವ ಹಣಕ್ಕೂ ಇದಕ್ಕೂ ಹೋಲಿಕೆಹಾಕಿ ನೋಡಿದರೆ ಈ ಮೊಬಲಗಿನಿಂದ ಖಂಡಿತವಾಗಿಯೂ ಗ್ರಾಮಾಂತರ ಪ್ರದೇಶಗಳಿಗೆ ನಗರಗಳಲ್ಲಿರತಕ್ಕಂಥ ವೈದ್ಯಕೀಯ, ನಗರನೈರ್ಮಲ್ಯ, ರಸ್ತೆಗಳ ಸೌಕರ್ಯ ಹಾಗೂ ಬೆಳಕಿನ ಅನುಕೂಲತೆ ಇತ್ಯಾದಿಗಳಾವವನ್ನೂ ಒದಗಿಸಲಿಕ್ಕೆ ಖಂಡಿತ ಸಾಧ್ಯವಿಲ್ಲ.

ಶ್ರೀ ಟಿ. ಸುಬ್ರಹ್ಮಣ್ಯ.—ನಗರಗಳ ವಿಚಾರವನ್ನು ಇದಕ್ಕೆ ಹೋಲಿಸಬೇಡಿ. ನಗರಗಳಲ್ಲಿರತಕ್ಕವರ ಮೇಲೆ ಇನ್ನೂ ಅನೇಕ ತೆರಿಗೆಗಳು ಬೀಳುತ್ತವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ನಗರವಾಸಿಗಳ ಮೇಲೆ ಹಾಕುತ್ತಿರುವಂಥ ತೆರಿಗೆಗಳನ್ನು ಈಗ ಈ ಗ್ರಾಮಾಂತರಗಳಲ್ಲೂ ಹಾಕಬೇಕೆಂಬುದಾಗಿ ಈ ಮಸೂದೆಯಲ್ಲಿ ಹೊಸದಾಗಿ ಒಂದು ಪ್ರಾವಿಷನ್ ಮಾಡಲಾಗಿದೆ. ಆದರೆ ಯಾರೋಒಬ್ಬ ಮನುಷ್ಯನಿಗೆ 500 ರೂಪಾಯಿಗಳಿಗಿಂತಲೂ ಹೆಚ್ಚಿನ ವರಮಾನ ಬರುವಹಾಗಿದ್ದರೆ ಅತನು ಇಂತಿಷ್ಟು ಟ್ಯಾಕ್ಸ್ ಕೊಡಬೇಕೆಂದು ಇಲ್ಲಿ ಹೇಳೋಣಾಗಿದೆ. ಆದರೆ ಅಂಥ ಸಂಪಾದನೆ ಹೊಂದಿರತಕ್ಕ ಜನರು ಆ ಪ್ರದೇಶದಲ್ಲಿದ್ದರೆ ತಾನೆ ಅತನಿಗೆ ಇಂಥ ಟ್ಯಾಕ್ಸ್ ಹಾಕಲು ಅವಕಾಶವಿರುವುದು? ಆದುದರಿಂದ ಈ ದಿವಸ ಸರ್ಕಾರದವರು ಈ ಸಂಸ್ಥೆಗಳ ಅಭಿವೃದ್ಧಿ ಸಾಧಿಸಬೇಕೆಂಬ ಆಸೆ ಅವರಿಗೆ ಇದ್ದುದೇ ಆದರೆ ಅವರು ಕನಿಷ್ಠಪಕ್ಷ ಶೇಕಡ 75ರಷ್ಟು ಆದಾಯವನ್ನಾದರೂ ಕೊಟ್ಟರೆ ಆಗ ಏನೋ ಒಂದು ರೀತಿಮಾಡಬಹುದು. ಆದರೆ ಇದರಲ್ಲಿ ಬಹುಭಾಗ ಸಿಬ್ಬಂದಿ ವೆಚ್ಚಕ್ಕೇ ಹೋಗಿಬಿಡುತ್ತದೆ. ಈ ದಿವಸ ನುಮಾರು ಬೆಂಗಳೂರುನಗರದಲ್ಲಿ 12 ಲಕ್ಷ ಜನಸಂಖ್ಯೆಇದ್ದು, ಈ ನಗರಕ್ಕೆ ಒಂದು ನೀರಿನವ್ಯವಸ್ಥೆಯನ್ನು ಒದಗಿಸುವುದಕ್ಕೆ 30-40 ಲಕ್ಷ ರೂಪಾಯಿಗಳ ಸ್ಕೀಮು ಆಗಿದೆ. ಹೀಗಿರುವಾಗ ಸರ್ಕಾರದವರು ಇಷ್ಟೊಂದು ಹಳ್ಳಿಗಳಿಗೆಲ್ಲ ಕೇವಲ ಶೇಕಡ 20ರಂತೆ ಲ್ಯಾಂಡ್ ರೆವಿನ್ಯೂ ಆದಾಯಕೊಟ್ಟು ನಾವೇನೋ ಈ ಹಳ್ಳಿಗಳನ್ನೆಲ್ಲ

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ಉದ್ಧಾರವಾಡುತ್ತೇವೆಂದು ಹೇಳಿದರೆ ಅದು ಎಂದಿಗೂ ಸಾಧ್ಯವಾಗದ ಮಾತು. ಈ ಶೇಕಡ 20ರಷ್ಟು ಎಂಬುದು ಕೆಲವು ಗ್ರಾಮಗಳನ್ನು ತೆಗೆದುಕೊಂಡರೆ 200 ರೂಪಾಯಿಗಳು ಸಹ ಬರುವುದಿಲ್ಲ. ಇಷ್ಟು ಹಣದಲ್ಲಿ ಅಲ್ಲೇನೂ ಮಾಡಲು ಸಾಧ್ಯವಿದೆ? ಒಂದು ರೀಡಿಂಗ್ ರೂಮನ್ನು ಕಟ್ಟುವುದಕ್ಕೂ ಕೂಡ ಸಾಲದು. ಇದನ್ನು ಕೊನೆಯ ಪಕ್ಷ ಶೇಕಡ 75 ಅಷ್ಟು ನ್ನಾದರೂ ಕೊಟ್ಟರೆ ಏನೋ ಅಷ್ಟಿಷ್ಟಾದರೂ ಆಗ ಬಹುದು. ಈಗತಾನೆ ಕೊಂಚ ಹೊತ್ತಿನ ಮುಂಚೆ ಮಾನ್ಯ ಮಂತ್ರಿಗಳು ಹೇಳಿದರು, ಕೆಲವು ತಾಲ್ಲೂಕುಗಳ ಜಮಾಬಂದಿ ಜಾಸ್ತಿಯಾಗಿದೆ, ಕೆಲವು ತಾಲ್ಲೂಕುಗಳ ಜಮಾಬಂದಿ ಕಡಮೆಯಾಗಿದೆ ಎಂದು. ಆದರೆ ಈ ವಿಚಾರ ದಲ್ಲಿ ನನ್ನ ಒಂದು ಸಲಹೆಯೇನೆಂದರೆ, ಈ ಹಣದ ಹಂಚಿಕೆಯನ್ನು ಆಯಾಯ ಗ್ರಾಮಗಳ ಬೇರೀಜ್ ಮೇಲೆ ನಿಗದಿಮಾಡುವುದಕ್ಕೆ ಬದಲು ಆಯಾಯ ಗ್ರಾಮಗಳ ಪ್ರಜಾಸಂಖ್ಯೆಗನುಗುಣವಾಗಿ ಮಾಡು ವುದು ನ್ಯಾಯವಾದುದೆಂದು ಹೇಳುತ್ತೇನೆ. ಜಮೀನಿನ ಆಧಾರದ ಮೇಲೆ ಇದನ್ನು ಅವಲಂಬಿಸುವುದು ಅಷ್ಟು ಸಾಧುವಾದ್ದಲ್ಲ. ಮಳೆಬೆಳೆಗಳು ಒಂದೇಸಮನಾಗಿ ಎಲ್ಲಕಡೆಗಳಲ್ಲೂ, ಎಲ್ಲಕಾಲಗಳಲ್ಲೂ ಒಂದೇಸಮ ನಾಗಿರುವುದಿಲ್ಲ. ಇದರಿಂದ ಆದಾಯ ಬಂದರೂ ಬರಬಹುದು, ಬಾರದಿದ್ದರೂ ಇರಬಹುದು. ಇಂಥ ಅಖಾತ್ರಿಯ ವರಮಾನದ ಮೇಲೆ ಇದನ್ನು ನಿಗದಿಮಾಡ ತಕ್ಕದ್ದು ಸಾಧುವಾದದ್ದಲ್ಲ. ಪ್ರಪಂಚದಲ್ಲಿ ಯಾವ ಒಬ್ಬ ಮನುಷ್ಯನಿಗೇಆಗಲಿ ಅವನು ಸುಖವಾಗಿ ಬಾಳಬೇಕಾಗಿದ್ದರೆ ಸರ್ಕಾರದವರು ಎಲ್ಲರಿಗೂ ಒಂದು ಸಮವಾದ ಅನುಕೂಲತೆಗಳನ್ನು ಕಲ್ಪಿಸಬೇಕಾದದ್ದು ಅವರ ಕರ್ತವ್ಯ. ಸಾರ್ವಜನಿಕರ ಆದಾಯವೇ ಸರ್ಕಾರದ ಒಂದು ಸ್ಫೂರ್ತಿತ್ತು. ಕೆಲವು ಕಡೆ ಕ್ಷಾಮಪೀಡಿತ ಪ್ರದೇಶಗಳಲ್ಲಿ ಕೆಲವು ವರ್ಷಗಳಕಾಲ ಕಂದಾಯ ವಸೂಲಾಗದೇಯೇ ಹೋಗಬಹುದು. ಕೆಲವುಕಡೆ ಬರತಕ್ಕ ಕಂದಾಯದಲ್ಲಿ ಕೇವಲ ಎಂಟು-ಹತ್ತು ರೂಪಾಯಿಗಳು ವಸೂಲಾಗುವುದೇ ಕಷ್ಟವಾಗ ಬಹುದು. ಅಂಥ ಸಂದರ್ಭಗಳಲ್ಲಿ ಇದು ತುಂಬ ಅಪಾಯಕಾರಿ. ಆದುದರಿಂದ ಈ ಮಸೂದೆಯ ಉದ್ದೇಶ ಒಳ್ಳೆಯದೇ ಆಗಿದ್ದರೂ ಇದರಿಂದ ಕೆಲವ ರಿಗೆ ಉಪಕಾರವಾಗಬಹುದು; ಕೆಲವರಿಗೆ ಅಪಕಾರವೂ ಆಗಬಹುದು. ಆದುದರಿಂದ ತಾವು ದೇಶದ ಎಲ್ಲ ಭಾಗಗಳಿಂದಲೂ ಬರತಕ್ಕ ಈ ಆದಾಯವನ್ನು ಒಂದು ಪೂಲ್‌ಮಾಡಿ ಅದನ್ನು ಎಲ್ಲ ಹಳ್ಳಿಗಳಿಗೂ ಒಂದು ಸಮನ್ವಯ ರೀತಿಯಲ್ಲಿ ಹಂಚಿಕೆ ಮಾಡತಕ್ಕದ್ದು ಯೋಗ್ಯವಾಗಿರುತ್ತದೆ. ಇದನ್ನು ಸರ್ಕಾರದವರು, ನಾನಾಗಲೇ ತಿಳಿಸಿದಂತೆ, ಆಯಾಯ ಗ್ರಾಮಗಳಲ್ಲಿರ ತಕ್ಕ ಪ್ರಜಾಸಂಖ್ಯೆ ನೋಡಿಕೊಂಡು ಅದಕ್ಕೆ ಅನು ಗುಣವಾಗಿ ಹಂಚಿಲು ತೊಂದರೆಯೇನೂ ಆಗಲಾರ ದು. ಕೆಲವು ತಾಲ್ಲೂಕುಗಳ ಜಮಾಬಂದಿ ಜಾ ್ತ ಯಾಗಿದ್ದು ಜನಸಂಖ್ಯೆ ಕಡಮೆಯಾಗಿರಬಹುದು. ಇನ್ನು ಕೆಲವು ತಾಲ್ಲೂಕುಗಳಲ್ಲಿ ಜನಸಂಖ್ಯೆ ಜಾಸ್ತಿ ಯಾಗಿದ್ದು ಜಮಾಬಂದಿ ಕಡಮೆಯಾಗಿರಬಹುದು. ಹೀಗೆ ಜಮಾಬಂದಿಯ ಆಧಾರದಮೇಲೆ ಈ ಹಣವನ್ನು ಹಂಚತಕ್ಕದ್ದು ತುಂಬ ತೊಂದರೆಗಳಿಗೆ ಅವಕಾಶ ವಾಗುತ್ತದೆ. ಈ ಹಂಚಿಕೆಯಾಗತಕ್ಕ ಹಣ ಸರ್ವರಿಗೂ ಒಂದು ಸರಿಸಮಾನವಾದರೀತಿಯಲ್ಲಿರಬೇಕು. ಹೀಗೆ ಮಾಡದಿದ್ದರೆ ಕೆಲವು ತಾಲ್ಲೂಕುಗಳ ಜಮಾಬಂದಿ ಹಣ ವೆಲ್ಲ ಆ ತಾಲ್ಲೂಕ್ ಬೋರ್ಡ್ ಒಂದಕ್ಕೆ ಹೋಗಿಬಿಡು ತ್ತದೆ. ಹೀಗೆ ಒಂದೊಂದು ತಾಲ್ಲೂಕಿಗೆ ಒಂದೊಂದು ರೀತಿಯ ಸಹಾಯವನ್ನು ನೀಡಬೇಕೆಂಬ ಅಭಿಪ್ರಾಯ ಸರ್ಕಾರಕ್ಕಿರುವುದಾದರೆ ದೇಶದಲ್ಲಿ ಅವರಿಗೆ ಆ ಸೋಷಿ ಯಲಿಸ್ಟಿಕ್ ಪ್ಯಾಟ್ಟನ್ ಆಫ್ ಸೊಸೈಟಿ ಎನ್ನತಕ್ಕದ್ದೇ ನಿದೆ ಅದನ್ನು ಖಂಡಿತ ಜಾರಿಗೆತರಲು ಆಗುವುದಿಲ್ಲ ವೆಂದು ಹೇಳುತ್ತೇನೆ. ಆದೃಷ್ಟಿಯಿಂದ ಹೇಳುವುದಾದರೆ, ಈ ಬಿಲ್ಲು ಖಂಡಿತ ದೇಶಕ್ಕೆ ಉಪಕಾರಿಯಾಗುವುದಿಲ್ಲ. ಈ ದಿವಸ ಸರ್ಕಾರದವರು ನಗರವಾಸಿಗಳಿಗೆಷ್ಟು ಸಹಾ ಯಗಳನ್ನೊದಗಿಸಿದ್ದಾರೋ ಅಷ್ಟನ್ನೂ ಗ್ರಾಮಾಂ ತರವಾಸಿಗಳಿಗೆ ಒದಗಿಸಬೇಕೆಂದರೆ ತುಂಬ ಕಷ್ಟ ವಿದೆ. ಈ ಹಿಂದೆ ಪ್ರತಿಯೊಂದು ಗ್ರಾಮದಲ್ಲೂ ವಾರ ಕ್ಕೊಂದು ಸಾರಿ ಸೋಮವಾರದ ಬಿಟ್ಟಿ ಎಂದು ಊರಿನ ಕೆಲಸಮಾಡುತ್ತಿದ್ದಂಥ ಪದ್ಧತಿ ಇತ್ತು. ಈಗಲೂ ಕೂಡ ಈ ಪದ್ಧತಿ ನಮ್ಮ ಹಳ್ಳಿಗಳಕಡೆ ಕೆಲವು ಭಾಗದಲ್ಲಿ ಜಾರಿಯಲ್ಲಿದೆ. ಈ ದಿವಸ ನಮ್ಮ ದೇಶದಲ್ಲಿ ಒಂದೂ ವರೆ ಕೋಟಿಜನರು ಗ್ರಾಮಗಳಲ್ಲಿ ವಾಸಮಾಡು ತ್ತಿದ್ದಾರೆ. 30 ಲಕ್ಷ ಸಂಸಾರಗಳಿವೆ. ಒಂದೊಂದು ವಾರಕ್ಕೊಮ್ಮೆ ಈ ಸೋಮವಾರದ ಬಿಟ್ಟಿ ಎಂದು ಕೆಲಸವಿಟ್ಟುಕೊಂಡರೆ ; ತಲಾ ಒಬ್ಬರಿಂದ ಒಂದೊಂದು ರೂಪಾಯಿ ಆ ಪಂಚಾಯಿತಿಗೆ ಕಾಂಟ್ರಿ ಬ್ಯೂಷ್ ಮಾಡಿದಂತಾಯಿತು. ಬಿತ್ತನೆ ಮತ್ತು ಕೊಯಿಲು ಕಾಲಗಳನ್ನು ಕೈಬಿಟ್ಟುಕೊಂಡು ಈ 30 ಲಕ್ಷ ಸಂಸಾರಗಳೂ ಒಂದೊಂದು ಸಂಸಾರಕ್ಕೆ ಒಬ್ಬೊ ಬ್ಬರಂತೆ ಬಂದರೆ 30 ಲಕ್ಷ ಜನರಾಗುತ್ತಾರೆ. ಈ 30 ಲಕ್ಷ ಜನರೂ 40 ವಾರಗಳ ಕಾಲ ವಾರಕ್ಕೊಂದು ದಿನದಂತೆ 40 ದಿನಗಳು ಕೆಲಸಮಾಡಿದರೆ 12 ಕೋಟಿ ರೂಪಾಯಿಗಳ ಕೆಲಸವನ್ನು ಒಂದುವರ್ಷದಲ್ಲಿ ಮಾಡಿ ದಂತಾಯಿತು. ಈ ಕೆಲಸದಲ್ಲಿ ಜನರಿಗೂ ಒಲುಮೆ ಯಿದೆ. ಕೆಲವು ಕಡೆ N.E.S. ಸ್ಕೀಮುಗಳಲ್ಲಿ ಈ ರೀತಿ ಸಹಾಯನೀಡಲಾಗುತ್ತಿದೆ. ನಮ್ಮ ದೇಶದಲ್ಲಿ ಜನ ಶಕ್ತಿ ಅಪಾರವಾಗಿದೆ. ಇಂಥ ಜನಶಕ್ತಿಯನ್ನು ಬಿಟ್ಟು ತರಿಗೆ ಬಲದಮೇಲೆ ದೇಶಕಟ್ಟುತ್ತೇವೆಂದು ಹೇಳು ವುದು ಖಂಡಿತ ಸಾಧ್ಯವಾಗದ ಬದುಕು. ಅನೇಕ ದೇಶ ಗಳು ಇಂಥ ಜನಶಕ್ತಿಯಿಂದಲೇ ಮುಂದಕ್ಕೆ ಬಂದಿವೆ. ಜೈನಾ-ರಷ್ಯಾ ದೇಶಗಳ ಚರಿತ್ರೆಯನ್ನು ನೋಡಿದರೆ ರಷ್ಯಾದಲ್ಲಿ ಕೇವಲ 45 ದಿವಸಗಳಲ್ಲಿ 50 ಸಾವಿರ ಎಕ್ರೆಗೆ ನೀರನ್ನೊದಗಿಸುವ ದೊಡ್ಡ ಕಾಲುವೆ ಯನ್ನು ಮಾಡಿಸಿದ್ದಾರೆ. ಮೂರು ಲಕ್ಷ ಕ್ಯುಬಿಕ್ ಪುಟ್ ಮೇಸನರಿ, ಐದು ಲಕ್ಷ ಗಜ ಬಂಡೆಹೊಡೆದರು ಎಂದರೆ ಈ ಕಾರ್ಯಗಳೆಲ್ಲ ಕೇವಲ ಜನಶಕ್ತಿಯ ಮೇಲೆ ಆಗಿವೆ. ನವ ಪ್ಲಾನಿಂಗ್ ಸಮಿತಿಯವರೂ ಕೂಡ ನಮ್ಮ ದೇಶದ ಜನಶಕ್ತಿಯಿಂದಲೇ ನಮ್ಮ ದೇಶಕಟ್ಟಲು ಸಾಧ್ಯವೆಂಬುದಾಗಿ ಭಾವಿಸಿ, ಗ್ರಾಮಾಂತರ ಪ್ರದೇಶ ಗಳಲ್ಲಿ ಕಾಂಟೂರ್ ಬಂಡುಗಳನ್ನೂ, ಛಾನಲ್‌ಗಳನ್ನೂ ಇರಿಗೇಷನ್ ಪ್ರಾಜೆಟ್ಟುಗಳನ್ನೂ ಹಾಕಬೇಕೆಂಬ ಆಲೋಚನೆ ಮಾಡಿದ್ದಾರೆ. ಆ ಪ್ರಯತ್ನದಲ್ಲದಾ ರೆಂದು ಕೇಳುತ್ತೇನೆ. ಅಂಥ ಜನಶಕ್ತಿಯನ್ನು ಹಳ್ಳಿಯಲ್ಲ ಗಳನುವುದಕ್ಕೊನ್ಸ್ಕರ, ಹಳ್ಳಿಯ ಅಭಿವೃದ್ಧಿಗೋನ್ಸ್ಕರ ಸರ್ಕಾರದ ನೆರವಿನ ಜೊತೆಗೆ ತಮ್ಮ ದುಡಿಮೆಯಿಂದ ಹಳ್ಳಿಯನ್ನು ಉದ್ಧಾರ ಮಾಡುವುದಕ್ಕೆ ಬಹಳ ಅನು ಕೂಲವಾಗುತ್ತದೆ. ಸೋಮವಾರದ ಬಿಡುವನ್ನು ಪ್ರಯೋಗಮಾಡಿ ಅದನ್ನು ಯಶಸ್ವಿಯಾಗಿ ಮಾಡಿದ ಪಕ್ಷದಲ್ಲಿ ಒಟ್ಟಿಗೆ ಲೆಕ್ಕಹಾಕಿ ನಾಲ್ಕೈದು ಕೋಟಿ ರೂಪಾಯಿಗಳನ್ನು ಪಂಚಾಯಿತಿಗೆ ಕೊಟ್ಟರೆ, ಒಟ್ಟು 10-12 ಕೋಟಿ ರೂಪಾಯಿವರೆಗೆ ಕೆಲಸವಾಗುತ್ತದೆ. ಇದರಿಂದ ಪಂಚಾಯಿತಿಯೂ ಅಭಿವೃದ್ಧಿಯಾಗಿ ಕೆಲಸಕ್ಕೂ ಸಹಾಯವಾಗುತ್ತದೆಂದು ನಾನು ಹೇಳ ಬೇಕಾಗುತ್ತದೆ.

ಈ ಮಸೂದಾ ಕಾನೂನನ್ನು ಒಳ್ಳೆಯ ಉದ್ದೇಶದಿಂದ, ಗ್ರಾಮಾಂತರ ವಾಸಿಗಳ ಕಲ್ಯಾಣಕ್ಕೋಸ್ಕರ ಮಾಡಿದ್ದೇವೆಂದು ಅಪ್ಪಣೆಕೊಟ್ಟರು. ಪಂಚಾಯಿತಿಯೊಳಗೆ representation ಎಂದು ಇಟ್ಟುಕೊಂಡಿದ್ದೀರಿ ಮತ್ತು ಇವರಿಗೆ ರಿಸರ್ವೇಷನ್ ಎಂದು ಹಾಕಿಕೊಂಡು ಪಂಚಾಯಿತಿಗಳಲ್ಲಿ ಪ್ರತ್ಯೇಕ ಸ್ಥಾನವನ್ನು ಕೊಟ್ಟಿದ್ದೀರಿ. ಅಸೆಂಬ್ಲಿಯಲ್ಲಿ ಕೂಡ ಅದೇರೀತಿಯಾಗಿ ಕೊಟ್ಟಿದ್ದೀರಿ. ತಾಲ್ಲೂಕು ಬೋರ್ಡಿನಲ್ಲಿ ರಿಸರ್ವೇಷನ್ ತೆಗೆದುಹಾಕಿ ಬರೀ ನಾಮಿನೇಷನ್‌ಮಾಡುತ್ತೀರಿ. ನಾಮಿನೇಷನ್‌ಮೂಲಕ ಬರುವ ಮನುಷ್ಯ ಜನಾನುರಾಗಿಯಾಗಿರುತ್ತಾನೆಂದು ಹೇಗೆತಾನೇ ಹೇಳುವುದಕ್ಕಾಗುತ್ತದೆ? ಪಂಚಾಯಿತಿ ಮತ್ತು ಮುನಿಸಿಪಾಲಿಟಿಗಳು ಮತ್ತು ಅಸೆಂಬ್ಲಿಯಲ್ಲಿ ರಿಸರ್ವೇಷನ್ ಕೊಡುತ್ತಿದ್ದೀರಿ. ತಾಲ್ಲೂಕು ಬೋರ್ಡುಗಳಿಗೆ ಮಾತ್ರ ನಿರ್ಬಂಧ ಹಾಕುತ್ತೀರಿ. ಇದರಲ್ಲಿ ನ್ಯೆಜವಾದ ಎಲೆಕ್ಷನ್, ಆಡಳಿತದ ಸ್ವಚ್ಛತೆ ಕಾಣುವುದಿಲ್ಲ. ಒಂದೊಂದು ಪುರಸಭೆಯಲ್ಲಿಯೂ ಒಂದು ಓಟಿನಿಂದ ಗೆದ್ದವರು ಬಹಳ ಜನರಿರುತ್ತಾರೆ. ನಾಲ್ಕು ಸ್ಥಾನಗಳನ್ನು ಮೀಸಲಾಗಿಟ್ಟು ತಮ್ಮವರುಮಾತ್ರ ಅಲ್ಲಿಗೆ ಬರುವಂತೆ ಮಾಡಬೇಕೆಂಬ ಆಸೆ ಇದೆ ಎಂದು ಇದರಿಂದ ವ್ಯಕ್ತವಾಗುತ್ತದೆ. ನಾಮಿನೇಷನ್ ಪದ್ಧತಿಯನ್ನು ವಜಾ ಮಾಡಿ. ಗ್ರಾಮಾಂತರಗಳಲ್ಲಿರುವ ಹಾಗೆ, ಪಂಚಾಯಿತಿಗಳಿಗೆ ಕೊಟ್ಟಿರುವಹಾಗೆ ತಾಲ್ಲೂಕು ಬೋರ್ಡ್‌ಗಳಿಗೂ ರಿಸರ್ವೇಷನ್ ಕೊಟ್ಟೇ ಕೊಡಬೇಕು. ಯಾವ ಹೋಬಳಿಯೊಳಗೆ ಆಗಲೀ ಜನರಲ್ ಸೀಟಿಗೆ ಯಾರು ಬೇಕಾದರೂ ನಿಂತುಕೊಳ್ಳಬಹುದು. ಮುನಿಸಿಪಾಲಿಟಿಗಳಲ್ಲಿ ಯಾವ ವಾರ್ಡುಗಳಲ್ಲಿ ಹರಿಜನರು ಜಾಸ್ತಿ ಇರುತ್ತಾರೆಯೋ ಅಲ್ಲಿ ಅವರಿಗೆ ರಿಸರ್ವೇಷನ್ ಮಾಡತಕ್ಕ ಪದ್ಧತಿ ಇದೆ. ಅದೇರೀತಿಯಾಗಿ ತಾಲ್ಲೂಕಿನ ಯಾವ ಹೋಬಳಿಯಲ್ಲಿ ಹರಿಜನರ ಸಂಖ್ಯೆಜಾಸ್ತಿ ಇದೆಯೋ ಅಲ್ಲಿ ಅವರಿಗೆ ರಿಸರ್ವೇಷನ್ ಕೊಡಬೇಕು ಸಾಮಾನ್ಯವಾಗಿ ಹರಿಜನರಲ್ಲಿ ಲಂಬಾಣಿ ಜನರಿಗೆ ಪ್ರಾತಿನಿಧ್ಯ ಜಾಸ್ತಿಕೊಟ್ಟಿಲ್ಲ. ಆದಿಕರ್ನಾಟಕರು, ಆದಿದ್ರಾವಿಡರು, ಲಂಬಾಣಿಗರು, ಯಾರೇ ಆಗಲಿ ಜನರ ಪ್ರತಿನಿಧಿಯಾಗಲು ಯಾರಲ್ಲಿ ಜನಾನುರಾಗ, ಯಾರಲ್ಲಿ ಅನುಸರಣೆ ಇವೆ ಎನ್ನುವ ಭಾವನೆ ಇದೆಯೋ ಅಂಥವರಿಗೆ ಚುನಾವಣೆಯಲ್ಲಿ ಬರುವುದಕ್ಕೆ ಅವಕಾಶಕೊಡಿ. ಇಲ್ಲದೆ ಹೋದರೆ ಖಂಡಿತವಾಗಿಯೂ ಚುನಾವಣೆಗಳು ನ್ಯಷ್ಟೆ ವಾಗಿ ಆಗುವುದಿಲ್ಲ.

ಪಂಚಾಯಿತಿ ಆಡಳಿತದಲ್ಲಿ ಸೆಕ್ರೆಟರಿಗೆ ಬಹಳ ಅಧಿಕಾರವನ್ನು ಕೊಟ್ಟಿರುವುದು ಬಹಳ ಆಶ್ಚರ್ಯವಾಗಿದೆ. ಸಸ್ಪೆಂಡ್ ಮಾಡಬಹುದು, ಜುಲ್ಮಾನೆ ಹಾಕಬಹುದು, ಇಂಥ ಅಧಿಕಾರಗಳನ್ನು ಸೆಕ್ರೆಟರಿಗೆ ಕೊಟ್ಟಿದ್ದೀರಿ. ಪಂಚಾಯಿತಿ ಚೇರ್‌ಮನ್ನರಿಗೂ ಇಲ್ಲದೆ ಇರುವ ಅಧಿಕಾರವನ್ನು ಒಬ್ಬ ಸೆಕ್ರೆಟರಿಗೆ ಕೊಟ್ಟಿರುವುದು ಖಂಡಿತವಾಗಿ ಆಶ್ಚರ್ಯಕರವಾದುದು.

ಇನ್ನು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್‌ಕೌನ್ಸಿಲ್ ವಿಚಾರ. ಹಿಂದೆ ಜಿಲ್ಲಾ ಬೋರ್ಡ್‌ಗಳು ಹತ್ತಾರುವರ್ಷಗಳಿಂದ ದೇಶದಲ್ಲಿ ಅನೇಕ ಮಹತ್ತರವಾದ ಕೆಲಸಗಳನ್ನು ಸಾಧನೆಮಾಡಿವೆ. ಅದರಲ್ಲಿ ಮುಖ್ಯವಾಗಿ ಪ್ರೆಸಿಡೆಂಟ್ ಎನ್ನುವ ಮನುಷ್ಯ ಖಾಸಗಿ ಮನುಷ್ಯ. ಹೀಗಿರುವಾಗ ಜಿಲ್ಲಾಧಿಕಾರಿಗಳು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲನ ಪ್ರೆಸಿಡೆಂಟರಾಗಿರಬೇಕೆಂದು ಹೇಳಿದ್ದೀರಿ. ಜಿಲ್ಲಾಧಿಕಾರಿಗಳು ಏಕೆ ಬರಬೇಕು? ಸ್ಥಳೀಯ ಸಂಸ್ಥೆಗಳು ಪ್ರಜಾಪ್ರಭುತ್ವವನ್ನು ಹೊಂದಿರಬೇಕು. It is a piece of democracy. ಹಾಗಿರುವಾಗ ತಾವು ಹಿಂದೆ ಸ್ಥಳೀಯ ಸಂಸ್ಥೆಗಳಿಗೆ ಏನೊಂದು ಅಧಿಕಾರವನ್ನು ಕೊಟ್ಟಿದ್ದಿರೋ, ಯಾವುದು ಪ್ರಜಾಪ್ರಭುತ್ವ ತತ್ವದಮೇಲೆ ಬೆಳೆದುಕೊಂಡು ಬಂದಿದೆಯೋ ಅಂಥ ಸಂಸ್ಥೆಗೆ ಜಿಲ್ಲಾಧಿಕಾರಿಗಳನ್ನು ಪ್ರೆಸಿಡೆಂಟರಾಗಿ ಮಾಡುವುದರಲ್ಲಿ ಅರ್ಥವೇನು?, ಚುನಾವಣೆಗಳಲ್ಲಿ ಈ ಸ್ಥಾನಕ್ಕೆ ಯಾರು ಬೇಕಾದರೂ ಬರಲಿ. ಜಿಲ್ಲಾಧಿಕಾರಿಗಳು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲನ ಸೆಕ್ರೆಟರಿಯಾಗಿರಲಿ, ಜಿಲ್ಲಾಧಿಕಾರಿಗಳ ಪರ್ಸನಲ್ ಅಸಿಸ್ಟೆಂಟರನ್ನು ಎಕ್ಸಿಕ್ಯೂಟಿವ್ ಆಫೀನರ್ ಎಂದು ಮಾಡಿ.

ಪ್ರಜಾಪ್ರಭುತ್ವ ಬೆಳೆದಂತೆ ಒಂದು ಮಟ್ಟದಲ್ಲಿ ಅದಕ್ಕೆ ಧಕ್ಕೆ ಇಲ್ಲದ ಹಾಗೆ ನೋಡಿಕೊಳ್ಳಬೇಕು. ಒಂದು ಮಹತ್ತರವಾದ ವಿಷಯವನ್ನು ನಾವು ಯೋಚನೆ ಮಾಡಬೇಕು. ಜಿಲ್ಲಾ ಬೋರ್ಡುಗಳು ದೊಡ್ಡ ಪ್ರಮಾಣದ ಕೆಲಸವನ್ನು ಮಾಡುತ್ತಿದ್ದುವು. ಆ ಪ್ರಮಾಣದ ಕೆಲಸವನ್ನು ಇವೊತ್ತು ಎಷ್ಟು ತಾಲ್ಲೂಕುಗಳಿವೆಯೋ ಅಷ್ಟು ಭಾಗಗಳಾಗಿ ವಿಂಗಡಿಸಿ ತಾಲ್ಲೂಕು ಬೋರ್ಡ್‌ಗಳನ್ನು ಮಾಡುವುದಕ್ಕೆ ಹೊರಟಿದ್ದೀರಿ. ಎಷ್ಟು ತಾಲ್ಲೂಕು ಬೋರ್ಡ್‌ಗಳನ್ನು ರಚನೆಮಾಡಿದರೂ ಏನಾದರೂ ಒಂದು ದೊಡ್ಡ ಕೆಲಸವಾಗಬೇಕಾಗಿದ್ದರೆ ತಾಲ್ಲೂಕು ಬೋರ್ಡುಗಳಿಗೆ ಎಷ್ಟು ಹಣ ಕೊಡಲಾಗುತ್ತದೆಯೋ ಅದರಲ್ಲಿ ನಿರ್ಧರಿಸುವುದಕ್ಕೆ ಶಕ್ತಿ ಇದೆಯೋ ಇಲ್ಲವೋ ಎಂದು ಯೋಚನೆ ಮಾಡಬೇಕು. ಅವರು ಎಷ್ಟು ಕೆಲಸವನ್ನು ಮಾಡಬೇಕಾಗುತ್ತದೆಂದರೆ maintenance of hospitals, maintenance of schools, maintenance of veterinary hospitals ಮುಂತಾದ ಎಷ್ಟೋ ಕೆಲಸಗಳನ್ನು, ಅವರಿಗೆ ಕೊಡತಕ್ಕ ಹಣದಲ್ಲಿ ಎಷ್ಟು ಮಾತ್ರ ಮಾಡುವುದಕ್ಕೆ ಸಾಧ್ಯ? ಒಂದು ತಾಲ್ಲೂಕಿನಲ್ಲಿ ಮೂರು ಹೈಸ್ಕೂಲು, ಮೂರು ಆಸ್ಪತ್ರೆ, ಮೂರು ವೆಟೆರಿನರಿ ಆಸ್ಪತ್ರೆ ಮತ್ತು ಅನೇಕ ರಸ್ತೆಗಳು ಇವುಗಳನ್ನೆಲ್ಲ maintain ಮಾಡಬೇಕಾಗಿರುತ್ತದೆ. ಇದು ನಿಜವಾಗಿಯೂ ಸಾಧ್ಯವೇ? ಇವೊತ್ತಿನದಿವಸ ತಾಲ್ಲೂಕು ಬೋರ್ಡುಗಳಿಗೆ ಎಷ್ಟು ಹಣವನ್ನು ಕೊಡುತ್ತಿದ್ದೀರೋ ಅದರಲ್ಲಿ ಅರ್ಧಭಾಗ ಸಿಬ್ಬಂದಿಗೆ ಹೋಗುತ್ತದೆ. ಇವೊತ್ತು ತಾಲ್ಲೂಕು ಬೋರ್ಡುಗಳನ್ನು ಇಟ್ಟುಕೊಳ್ಳುವುದೇ ಏನ್ನುವುದು ಮುಖ್ಯವಾದ ಪ್ರಶ್ನೆ. ಜಿಲ್ಲಾ ಬೋರ್ಡುಗಳಲ್ಲಿ ಎಲ್ಲ ಹಣವನ್ನೂ ಒಂದೇಕಡೆ ಸೇರಿಸಿ ಆಡಳಿತನಡೆಸುವುದಕ್ಕೂ, ಅದನ್ನೇ ಹತ್ತು ಭಾಗ ಮಾಡಿ ತಾಲ್ಲೂಕುಗಳಿಗೆ ಹಂಚಿ ಕೆಲಸಮಾಡುವುದಕ್ಕೂ ಬಹುಮಟ್ಟಿಗೆವ್ಯತ್ಯಾಸವಿದೆ. ತಾಲ್ಲೂಕು ಮಟ್ಟದಲ್ಲಿ ಎಷ್ಟೇ ಕೆಲಸಮಾಡಿದರೂ ಒಟ್ಟಿಗೆ ಕೆಲಸ ಮಾಡಿದಹಾಗೆ ಆಗುವುದಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).— ಅವರು ಏಕೆ ಹೇಳುತ್ತಾರೆಂದರೆ, we are not definite whether this Bill will be passed. ಇಂಡಿಯಾ ಸರ್ಕಾರದಿಂದ ಒಂದು ಡ್ರಾಫ್ಟ್ ಬಿಲ್ಲನ್ನು ಕಳಿಸಿದ್ದಾರೆ. ಅದರ ಪ್ರಕಾರ ತಿದ್ದುಪಡಿಯಾದ ಬೇರೆ ಬಿಲ್ ಬರುತ್ತದೆಯೋ ಏನೋ ಎಂದು ಅನ್ನಿಸುತ್ತದೆ. ಆದುದರಿಂದ ಇನ್ನೂ scope ಇದೆ ಎಂದು ಹೇಳಿದರು.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಇವೊತ್ತು ಯಾವ ಹೊಸ ಹೊಣೆಗಾರಿಕೆಯನ್ನು ತಾಲ್ಲೂಕು ಬೋರ್ಡ್‌ಗಳ ಮೇಲೆ ಹಾಕಬೇಕೆಂದಿದ್ದೀರೆಯೋ ಅದರಲ್ಲಿ ಹತ್ತು ಭಾಗಮಾಡಿ ತಾಲ್ಲೂಕುಗಳಿಗೆ ಹಂಚಿ ಕೆಲಸಮಾಡುವುದಕ್ಕೂ ಬಹುಮಟ್ಟಿಗೆ ವ್ಯತ್ಯಾಸವಿದೆ. ತಾಲ್ಲೂಕು ಮಟ್ಟದಲ್ಲಿ ಎಷ್ಟೇ ಕೆಲಸಮಾಡಿದರೂ ಒಟ್ಟಿಗೆ ಕೆಲಸ ಮಾಡಿದಹಾಗೆ ಆಗುವುದಿಲ್ಲ.

Sri T. SUBRAMANYA.—The general scheme of abolition of District Boards has been accepted.

Sri S. D. KOTHAVALE (Chikodi).—I rise to a point of order, Sir.

I invite the attention of the Hon'ble Member to rule 77 of the Rules of Procedure and Conduct of Business. It runs thus:

> "The debate on a motion that the Bill as reported by the Select or Joint Select Committee be taken into consideration shall be confined to consideration of the report of the Select or Joint Select Committee and the matters referred to in that report or any alternative suggestions consistent with the principle of the Bill."

In view of this rule 77, the scope of the debate is very much limited. My learned brother who is participating in the debate is touching upon the original concept of the Bill itself. I think the speech is not consistent with rule 77 of the procedure.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಕೆಲವು ಭಾಗವನ್ನು ಸರ್ಕಾರ ತೆಗೆದುಕೊಳ್ಳಲಿ ಎಂದು ಸೂಚನೆಮಾಡುತ್ತಿದ್ದೇನೆ. Construction of roads and other means of communications which are not under the control of any other authority.

Mr. CHAIRMAN.—According to rule 77 of the Rules of Procedure, the scope of the debate is restricted to the consideration of the report of the Select Committee. Of course, you see we have gone through the final consideration of this Bill and I would like you to keep this in view.

Sri M. C. NARASIMHAN.—Is it suggested that we are precluded from giving amendments to what the Select Committee has given?

Mr. CHAIRMAN.—I do not believe, you have any reason to assume here. I was referring to section 77 of the Rules of Procedure which defines the scope of the discussion today. I would like you to read that section. Sri S. D. Kothavale has already read that section. So far as the amendments are concerned, the section does not say anything.

Sri V. SRINIVASA SHETTY (Coondapur).—The section itself says that the matters referred to in the report or any other alternative suggestion consistent with the principles of the Bill could be discussed. It does not preclude an Hon'ble Member giving alternative suggestion consistent with the principles of the Bill. We need not confine ourselves within the four corners of the Bill at all. It is quite clear.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ನಾನು ಹೇಳುವುದು ಇಷ್ಟೆ. ಈಗ obligatory functions of the Taluk Boards ಎಂದು ಏನು ಇವೆಯೋ ಅವುಗಳನ್ನೆಲ್ಲ ನಿರ್ವಹಿಸುವುದಕ್ಕೆ ತಾಲ್ಲೂಕು ಬೋರ್ಡ್‌ಗಳಿಗೆ ನಾವು ಕೊಡುವ ಹಣ ಸಾಕೇ ಎನ್ನುವುದು ಮುಖ್ಯವಾದ ಪ್ರಶ್ನೆ. ನಾನು ಸರ್ಕಾರವನ್ನು ಪ್ರಾರ್ಥನೆ ಮಾಡಿ ಕೊಳ್ಳುವುದೇನೆಂದರೆ, establishment, management, maintenance and inspection of hospitals, dispensaries, veterinary hospitals, markets, travellers' bungalows ಎಂದು ಹತ್ತಾರು ಕಲಮುಗಳನ್ನು ಕೊಟ್ಟಿದ್ದಾರೆ. ಇವುಗಳ ಹೊಣೆಗಾರಿಕೆಯನ್ನು ಹೊಸದಾಗಿ ತಾಲ್ಲೂಕು ಬೋರ್ಡ್‌ಗಳಿಗೆ ವಹಿಸುತ್ತಿದ್ದೀರಿ. ಇದರಲ್ಲಿ hospitals, schools, veterinary hospitals ಇವುಗಳನ್ನು ನಡೆಸುವುದಕ್ಕೆ ತಾಲ್ಲೂಕು ಬೋರ್ಡ್‌ಗಳಿಗೆ ಶಕ್ತಿ ಇದೆಯೇ, ಅವಕ್ಕೆ ಬೇಕಾಗುವಷ್ಟು ಹಣವಿದೆಯೇ, ಎಂದು ಯೋಚನೆಮಾಡಬೇಕು. ಇವುಗಳನ್ನು ಸರ್ಕಾರದವರು ತೆಗೆದುಕೊಳ್ಳಬೇಕು. ಆಸ್ಪತ್ರೆಗಳು ಹೊಸದಾಗಿ ತಾಲ್ಲೂಕು ಬೋರ್ಡ್‌ಗಳಿಗೆ ಹೋಗುತ್ತವೆಂದರೆ ಅರ್ಥವೇನು? ಸಂಬಳ ಸಾರಿಗೆಗಳನ್ನು ಲೆಕ್ಕ ಹಾಕಿದರೆ ಎಷ್ಟಾಗುತ್ತದೆಂಬುದನ್ನು ಯೋಚನೆಮಾಡಬೇಕಾಗಿದೆ. ನಾನು ಹೇಳುವುದೇನೆಂದರೆ, ಕೊನೆಯಪಕ್ಷ obligatory functions ಏನಿವೆಯೋ ಅವುಗಳಲ್ಲಿ ಐದನೆಯ ಕಲಂನಲ್ಲಿರುವಷ್ಟನ್ನಾದರೂ ಕೂಡ ಪೂರ್ತಿಯಾಗಿ ಸರ್ಕಾರವೇ ವಹಿಸಿಕೊಳ್ಳಬೇಕು. ಏತಕ್ಕೆಂದರೆ ಒಂದು ಆಸ್ಪತ್ರೆ ನಡೆಸುವುದು ಸಾಮಾನ್ಯವಾದ ವಿಚಾರವಲ್ಲ. ಹೈಸ್ಕೂಲು ನಡೆಸುವುದು ಸಾಮಾನ್ಯ ವಿಚಾರವಲ್ಲ. ಇವೆಲ್ಲಾ ಸರ್ಕಾರ ನಡೆಸಿಕೊಂಡು ಬರುವುದು ಒಳ್ಳೆಯದು. ಮುನಿಸಿಪಾಲಿಟಿಯವರು ಒಂದೂ ಯೋಚನೆ ಮಾಡದೆ ಹೈಸ್ಕೂಲು ಸ್ಟಾರ್ಟ್‌ಮಾಡಿ, ಆಸ್ಪತ್ರೆ ಸ್ಟಾರ್ಟ್‌ಮಾಡಿ ಇವೊತ್ತು ಯಾವ ರೀತಿ ನಡೆಯುತ್ತದೆ ಎಂದರೆ 30 ರೂಪಾಯಿ ಸಂಬಳ ಕೊಟ್ಟು 50 ರೂಪಾಯಿಗೆ ಸೈನ್ ಮಾಡಿಸಿಕೊಳ್ಳುವ ಸ್ಥಿತಿಯಲ್ಲಿ ಇದ್ದಾರೆ. ಇಂಥಾ ಪರಿಸ್ಥಿತಿ ಒದಗಿದೆ. ಸರ್ಕಾರದ್ದು ಜಾಸ್ತಿ ಹೊಣೆಗಾರಿಕೆ ಇದೆ. ಇವನ್ನು ಸರ್ಕಾರದವರು ವಹಿಸಿಕೊಂಡು ನಡೆಸಿದರೆ ಆಗ ತಾಲ್ಲೂಕು ಬೋರ್ಡ್ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ಹೇಳಬೇಕಾಗಿದೆ. ಪಂಚಾಯತಿ ಮಾಡಿದ ಹಾಗೆ ತಾಲ್ಲೂಕು ಬೋರ್ಡಿಗೂ ಕೂಡ 20 ಪರ್ಸೆಂಟ್ ಅಲಾಟ್ ಮಾಡಿದರೆ ಬಹಳ ಕಡಮೆಯಾಗುತ್ತದೆ. ತಾಲ್ಲೂಕು ಬೋರ್ಡ್‌ಗಳಿಗೆ ಕೊನೆಯಪಕ್ಷ 30 ಪರ್ಸೆಂಟ್‌ಗೆ ಜಾಸ್ತಿ ಮಾಡಬೇಕು. 20 ಪರ್ಸೆಂಟ್ ಹಣ ಎಷ್ಟಾಗುತ್ತದೆ? ಯಾವುದಾದರೂ ಒಂದು ತಾಲ್ಲೂಕು ಉದಾಹರಣೆ ತೆಗೆದುಕೊಂಡು ಅಲ್ಲಿ ಎಷ್ಟು ಹೈಸ್ಕೂಲುಗಳಿವೆ, ಎಷ್ಟು ಆಸ್ಪತ್ರೆಗಳಿವೆ, ಎಷ್ಟು ರೋಡುಗಳಿವೆ, ಅವುಗಳ ಮೈನ್‌ನೆನ್ಸಿಗೆ ಎಷ್ಟಾಗುತ್ತದೆ, ಎಷ್ಟು

ಬ್ಲಿಷ್‌ಮೆಂಟಿಗೆ ಎಷ್ಟಾಗುತ್ತದೆ ಎಂದು ಲೆಕ್ಕವನ್ನು ಹಾಕಿ ಅಂಕ ಅಂಶಗಳಿಂದ ನೋಡಿದ ಪಕ್ಷದಲ್ಲಿ ಖಂಡಿತವಾಗಿ ಅವನ್ನು ನಡೆನುವುದಕ್ಕೆ ಸಾಧ್ಯವಿಲ್ಲ. ಸೆಕ್ಷನ್ 165 ರಲ್ಲಿ ಇದ್ದಂತೆ ಇದಕ್ಕೂ ಕೂಡ 20 ಪರ್ಸೆಂಟ್ ಎಂದು ಅಲಾಟ್ ಮಾಡಿದ್ದಾರೆ. ಅದನ್ನು ಕೊನೆಯ ಪಕ್ಷ 30 ಪರ್ಸೆಂಟಿಗೆ ಜಾಸ್ತಿ ಮಾಡದೆ ಇದ್ದಪಕ್ಷದಲ್ಲಿ ತಾಲ್ಲೂಕು ಬೋರ್ಡು ಫಂಕ್ಷನ್ ಮಾಡುವುದಕ್ಕಾಗುವುದಿಲ್ಲ. ತಾಲ್ಲೂಕು ಬೋರ್ಡುಗಳಿಗೆ ಅಲ್ಲಿ ಪಾಪ್ಯುಲೇಷನ್ ಎಷ್ಟಿದೆಯೋ ಅದರ ಮೇರೆ ಹಂಚಬೇಕು ಎಂದು ಪುನಃ ಹೇಳಬೇಕಾಗಿದೆ. ಆಮೇಲೆ ಪಂಚಾಯತಿಗಳು ಟೋಲ್ಸ್ ಹಾಕಬಹುದು ಎಂದು ಹೇಳಿದ್ದಾರೆ. ಅವರು ಆಕ್ಟ್ರಾಯ್ ಹಾಕುವಾಗ ಒಂದು ಎಗ್ಜೆಮ್‌ಷನ್ ಕೊಟ್ಟಿದ್ದಾರೆ. ಅಗ್ರಿಕಲ್‌ಚರಲ್ ಪ್ರೊಡ್ಯೂಸ್ ಆಯಾಯ ಪಂಚಾಯತಿ ಲಿಮಿಟ್ಸ್‌ನಲ್ಲಿ ಹಾಕಕೂಡದು ಎಂದು ಹೇಳಿದ್ದಾರೆ. ಇನ್ನೊಂದು ಕ್ಲಾಸ್ ಅಲ್ಲಿ ಸೇರಿಸಬೇಕು. ಇವೊತ್ತಿನ ದಿವಸ ಒಂದು ಸಾಮಿಲ್ ಇದೆ ಎಂದು ಇಟ್ಟುಕೊಳ್ಳಿ. ಕೇವಲ ಮರ ಕಟ್ಟುವಾಡುವುದಕ್ಕೆ ಅಲ್ಲಿಗೆ ಬರುತ್ತಾರೆ. ತರೀಕೆರೆಯಲ್ಲಿ ಸಾಮಿಲ್ಲುಗಳು ಹತ್ತು ಇವೆ. ಮರ ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ಕೊಂಡು ಕೊಳ್ಳುತ್ತಾರೆ. ಅಲ್ಲಿ ಕಟ್ಟು ಮಾಡುತ್ತಾರೆ. ಯಾವ ಮೆಟೀರಿಯಲ್ ಪ್ರೊಸೀಸಿಂಗಿಗೆ ಬರುತ್ತದೆಯೋ ಅಂಥ ಪದಾರ್ಥಕ್ಕೆ ಟ್ಯಾಕ್ಸ್ ಹಾಕಕೂಡದು. ಬೆಲೆ ಈಗಾಗಲೇ ಜಾಸ್ತಿಯಾಗಿದೆ. ಅದಕ್ಕೆ ಹೊಸದಾಗಿ ಆಕ್ಟ್ರಾಯ್ ಹಾಕಕೂಡದು ಎಂದು ಕಲಮ್ ಸೇರಿಸಬೇಕು. ಎಷ್ಟೋಜನ ಗ್ರೌಂಡ್‌ನಟ್ಸ್ ಗಾಡಿಯನ್ನು ಪ್ರೊಸೀಸಿಂಗ್ ಗೋನ್ಕರ ತರುತ್ತಾರೆ ಮತ್ತು ಅದನ್ನು ಆಮೇಲೆ ವಾಪಸ್ಸು ತೆಗೆದುಕೊಂಡು ಹೋಗುತ್ತಾರೆ. ಟೌನ್ ಏರಿಯಾದಲ್ಲಿ ಕನ್ಸ್ಯೂಮ್ ಮಾಡದೆ ಇದ್ದ ಪಕ್ಷದಲ್ಲಿ ಟ್ಯಾಕ್ಸ್ ಹಾಕಬೇಡಿ. ಈಗ ತಿಪಟೂರು, ತುರುವೇಕೆರೆ ಒಂದು ಸಬ್ ಮಾರ್ಕೆಟ್‌ರೀತಿ ಇವೆ. ಮಾಲು ಬರುವ ಉದ್ದೇಶ ಲೋಕಲ್ ಕನ್ಸರ್ಪ್ಷನ್ ಗೋನ್ಕರ ಅಲ್ಲ. ಮಾರಾಟಕ್ಕೋನ್ಸರ ಬರುತ್ತದೆ. ಹೊರಗಡೆ ಹೋಗುತ್ತದೆ. ಹೊರಗಡೆ ಹೋಗುವಕಡೆ ಆಕ್ಟ್ರಾಯ್ ಟ್ಯಾಕ್ಸ್ ಇದೆ. ಅಂಥ ಪದಾರ್ಥಗಳಿಗೆ ಟ್ಯಾಕ್ಸ್ ಹಾಕದ ಹಾಗೆ ರಕ್ಷಣೆ ಕೊಡಬೇಕು. ಹಳ್ಳಿಗಾಡಿನ ಜನಗಳು ದೊಡ್ಡದೊಡ್ಡ ಸ್ಥಳಗಳಿಗೆ ಹೋಗಿ ಮಾರಾಟಮಾಡಬೇಕು. ಆಕ್ಟ್ರಾಯ್ ಯಾವಾಗ ಹಾಕಬೇಕೆಂದರೆ ಯಾವುದು ಜಾಸ್ತಿ ಖರ್ಚಾಗುತ್ತದೋ ಯಾವುದನ್ನು ಜಾಸ್ತಿ ಉಪಯೋಗಿಸುತ್ತಾರೋ ಅಂಥಾದ್ದಕ್ಕೆ ಆಕ್ಟ್ರಾಯ್ ಹಾಕುವುದು ನ್ಯಾಯ. ಮಾರ್ಕೆಟ್ಟಿನಲ್ಲಿ ಒಂದು ತೆಂಗಿನಕಾಯಿಗೆ ಒಂದು ಕಾಸು ಹಾಕಿದರೆ ಸಾಧ್ಯವಿದೆಯೇ? ಅಂಥಕಡೆ ಎಗ್ಜೆಮ್‌ಷನ್ ಕೊಡಬೇಕಾಗುತ್ತದೆ. ಯಾರಾದರೂ ಲೈಸನ್ಸ್ ಇಲ್ಲದೆ ಮನೆ ಕಟ್ಟಿದರೆ ಯಾವುದಾದರೂ ತಪ್ಪು ಮಾಡಿದರೆ 500 ರೂಪಾಯಿಗಳವರೆಗೆ ಜುಲ್ಮಾನೆ ಹಾಕಬೇಕು ಎಂದು ಹೇಳಿದ್ದಾರೆ. ಜುಲ್ಮಾನೆ ಹಾಕುವುದು ಮ್ಯಾಜಿಸ್ಟ್ರೇಟರ ಮನಸ್ಸಿನ ಪರಿಣಾಮದಮೇಲೆ ಹೋಗುತ್ತದೆ. ಪ್ರೊಹಿಬಿಷನ್ ಕೇಸನ್‌ನಲ್ಲಿ ಎಷ್ಟೋ ಮ್ಯಾಜಿಸ್ಟ್ರೇಟರುಗಳು ಐದು ರೂಪಾಯಿ ಜುಲ್ಮಾನೆ ಹಾಕುತ್ತಾರೆ. ಇನ್ನು ಕೆಲವರು 50 ರೂಪಾಯಿ ಇನ್ನೂ ಕೆಲವರು 200 ರೂಪಾಯಿ ಹಾಕುತ್ತಾರೆ. ಜನ ಜಾಗ್ರತಿ ಕಡಮೆ ಇರುವ ಪ್ರದೇಶಗಳಲ್ಲಿ ಜನರು ತಿಳಿಯದೆ ಅಕಸ್ಮಾತ್ ತಪ್ಪು ಮಾಡಬಹುದು. ಆದ್ದರಿಂದ 500 ರೂಪಾಯಿಗಳ ಪರಿಮಿತಿ ಇಟ್ಟರೆ ಸರಿಹೋಗುವುದಿಲ್ಲ. ಆದ್ದರಿಂದ 500 ರೂಪಾಯಿಗಳ ಪರಮಾವಧಿ ಹೋಗಬೇಕು. ಇನ್ನೊಂದುಕಡೆ ಮ್ಯಾಜಿಸ್ಟ್ರೇಟರು 25 ರೂಪಾಯಿಗಳನ್ನು ಹಾಕಬಹುದು ಎಂದು ಹೇಳಿದ್ದಾರೆ. 500 ರೂಪಾಯಿಗಳ ಪರಮಾವಧಿ ಇಟ್ಟರೆ ಬಹಳ ಕ್ರೂರ ಕಾನೂನು ಆಗುತ್ತದೆ. ಅದಕ್ಕೋಸ್ಕರ ಕನಿಷ್ಟ ಪಕ್ಷ 100 ರೂಪಾಯಿಗಳನ್ನು ಇಟ್ಟರೆ ಸಾಕು ಎಂದು ನನ್ನ ಅಭಿಪ್ರಾಯ. ಆಮೇಲೆ ಇನ್ನೊಂದು ಸೆಕ್ಷನಿನಲ್ಲಿ ತಾಲ್ಲೂಕು ಬೋರ್ಡ್ ಮೀಟಿಂಗಿಗೆ ಎಂ. ಎಲ್. ಎ. ಗಳು ಹಾಜರಾಗತಕ್ಕದ್ದು, ಆದರೆ ವೋಟ್ ಮಾಡುವುದಕ್ಕೆ ಅಧಿಕಾರವಿಲ್ಲ ಎಂದು ಹೇಳುತ್ತಾರೆ.

Sri T. SUBRAMANYA.—Will you please refer to page No. 4 which gives the definition of "Octroi". "Octroi" means a tax levied on the entry of goods into a residential area within the jurisdiction of a Town Panchayat for consumption, use or sale therein.

Sri C. K. RAJAIAH SETTY.—I have seen the amendment. The agricultural produces that are grown in Panchayat limits are exempted. Even if these products are brought from adjacent areas to the market place, they should be exempted.

ಆಮೇಲೆ ಎಂ. ಎಲ್. ಎ. ಗಳಿಗೆ ನಾಮಕಾವಸ್ಥೆಗೆ ಕೂಡುವುದಕ್ಕೆ ಮಾತ್ರ ಅವಕಾಶವಿದೆ ಎಂದು ಉಲ್ಲೇಖಿಸಿದ್ದಾರೆ. ನಿಜವಾಗಿ ತಾಲ್ಲೂಕಿನ ಎಲ್ಲಾ ಜನಗಳಿಂದ ಆರಿಸಿ ಬಂದ ಎಂ. ಎಲ್. ಎ. ಗಳನ್ನು ನಾಮಿನೇಟ್ ಮಾಡಿ ವೋಟ್ ಕೊಡುವ ಸ್ಥಾನ ಕೊಟ್ಟರೂ ತಪ್ಪು ಆಗುವುದಿಲ್ಲ. N.E.S. ನಲ್ಲಿ ಸ್ಥಾನ ಕೊಟ್ಟಿದ್ದಾರೆ. ನಾಮಾನ್ಯವಾಗಿ ತಾಲ್ಲೂಕು ಬೋರ್ಡಿನಲ್ಲಿ ಎಲ್ಲರಿಗೂ ನಮಾನವಾದ ಹಕ್ಕು ಕೊಟ್ಟರೆ ಒಳ್ಳೆಯದು. ಇಲ್ಲದಿದ್ದರೆ ಎಷ್ಟುಜನ ಮೀಟಿಂಗ್‌ನಲ್ಲಿ ಆಸಕ್ತಿ ವಹಿಸುತ್ತಾರೆ ಎನ್ನುವ ಅನುಮಾನವಿದೆ. ಅಲ್ಲಿ ನಾಮಕಾವಸ್ಥೆಗೆ ಕುಳಿತುಬಂದರೆ ಅದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಅದಕ್ಕೆ ಬದಲು ಹೋಗದೆ ಇರಬಹುದು.

Sri C. M. ARUMUGHAM (Kolar Gold Fields).—He can give his suggestion. He can take part in the discussion.

ಶ್ರೀ ಸಿ. ಕೆ. ರಾಜಯ್ಯಶೆಟ್ಟ.—ತಾಲ್ಲೂಕು ಬೋರ್ಡಿಗೆ ತಾಲ್ಲೂಕು ಎಂ. ಎಲ್. ಎ. ಗಳನ್ನು ನಾಮಿನೇಟ್ ಮಾಡಬೇಕು ಎಂದು ಹೇಳುತ್ತೇನೆ. ಯಾವಾಗ ಎಲೆಕ್ಷನ್‌ಗಳು ಜಾಸ್ತಿಯಾಗುತ್ತವೋ, ರಾಷ್ಟ್ರದಲ್ಲಿ ಗೊಂದಲವೂ ಜಾಸ್ತಿಯಾಗುತ್ತದೆ. ಪ್ರತಿಯೊಂದು ಹಳ್ಳಿಯಲ್ಲೂ ಪಾರ್ಟಿಗಳು ಜಾಸ್ತಿಯಾಗುತ್ತವೆ. ಪಂಚಾಯತಿ ಎಲೆಕ್ಷನ್‌ನಲ್ಲಿ ಒಂದು ಪಾರ್ಟಿ, ತಾಲ್ಲೂಕು ಬೋರ್ಡ್ ಎಲೆಕ್ಷನ್ನಿನಲ್ಲಿ ಒಂದು ಪಾರ್ಟಿ, ಜನರಲ್ ಎಲೆಕ್ಷನ್‌ನಲ್ಲಿ ಅನೇಕ ಪಾರ್ಟಿಗಳು ಹೀಗೆ ಆಗುತ್ತವೆ. ಸರ್ಕಾರದವರು ಇದನ್ನ ಆಲೋಚನೆ ಮಾಡಬೇಕು. ಆಯಾಯ ತಾಲ್ಲೂಕಿಗೆ ಸಂಬಂಧಪಟ್ಟ ಕಾರ್ಪೊರೇಟ್ಯೆಯನ್ನಿ ಮೆಂಬರುಗಳನ್ನು ಚೇರ್ಮನ್ ಆಗಿ ನಾಮಿನೇಟ್ ಮಾಡಬೇಕು. ಇಷ್ಟು ಹೇಳಿ ಈ ಬಿಲ್ಲನ್ನು ಈರೀತಿ ನಿರೂಪಿಸುತ್ತಾರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

4-30 P.M.

ಶ್ರೀ ಎಂ. ಆರ್. ಪಾಟೀಲ್ (ಹುಬ್ಲಿ).—ಸ್ವಾಮಿ, ನಮ್ಮ ಪ್ರಾಂತದ ಒಟ್ಟು ಜನಸಂಖ್ಯೆಯಲ್ಲಿ ನೂರರಲ್ಲಿ ಎಪ್ಪತ್ತಕ್ಕಿಂತ ಮೇಲ್ಪಟ್ಟು ಜನಗಳು ಗ್ರಾಮಾಂತರ ಪ್ರದೇಶಗಳಲ್ಲೇ ವಾಸಮಾಡುತ್ತಿದ್ದಾರೆ. ಅನೇಕ ಶತಮಾನಗಳಿಂದಲೂ ಅನೇಕ ರೀತಿಯಾದ ಸುಲಿಗೆಗಳಿಗೆ ಒಳಪಟ್ಟಿರುವ ನಮ್ಮ ಗ್ರಾಮಾಂತರ ಪ್ರದೇಶಗಳು ಚೈತನ್ಯ ಭರಿತವಾಗಬೇಕು, ಸಂಪದ್ಯುಕ್ತವಾದ ಗ್ರಾಮರಾಜ್ಯಗಳನ್ನಾಗಿ ಸ್ಥಾಪನೆ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿರುವ ಮತ್ತು ಪಟ್ಟಣದಲ್ಲಿರುವ ಜೀವನದ ಅಂತರವನ್ನು ಕಡಮೆ ಮಾಡಬೇಕು. ಈ ರೀತಿಯಾಗಿ ಪಟ್ಟಣಗಳಲ್ಲಿರುವ ಮತ್ತು ಹಳ್ಳಿಗಳಲ್ಲಿರುವ ಜನಗಳ ಜೀವನದ ಮಟ್ಟಗಳ ಅಂತರವನ್ನು ಕಡಮೆ ಮಾಡಬೇಕು ಎನ್ನುವ ಮಹತ್ತರವಾದ ಧ್ಯೇಯವನ್ನು ನಮ್ಮ ಮುಂದೆ ಇಟ್ಟುಕೊಂಡು ಹೊರಟಿದ್ದೇವೆಯೇ ಎಂದು ನೋಡಿದರೆ ಈ ದಿವಸ ನಮ್ಮ ಮುಂದೆ ಬಂದಿರುವ ಬಿಲ್ಲಿನಲ್ಲಿ ಈ ತರಹ ಇಲ್ಲ ಎನ್ನುವುದು ಗೊತ್ತಾಗುತ್ತದೆ. ಗ್ರಾಮಪಂಚಾಯತಿಗಳನ್ನು ಸಂಘಟಿಸಿ ಗ್ರಾಮ ರಾಜ್ಯವನ್ನು ಎಂದು ಮುಂದೆ ಕಟ್ಟುವುದಕ್ಕೆ ಅವು ಬೀಜವಾಗಿ ಇರಬೇಕು ನಾನು ಭಾವನೆ ಮಾಡುತ್ತೇನೆ. ನಮ್ಮ ಧ್ಯೇಯ ಧೋರಣೆಗಳ ಪ್ರಕಾರ ಗ್ರಾಮಪಂಚಾಯಿತಿಗಳು, ಸಹಕಾರ ಸಂಘಗಳು, ಇವು ಗ್ರಾಮ ರಾಜ್ಯವನ್ನು ಕಟ್ಟಲಿಕ್ಕೆ ಅವಶ್ಯವಾದ ಮತ್ತು ಮುಖ್ಯವಾದ ಸಂಪತ್ತುಗಳೆಂದು ನಾವು ತಿಳಿದುಕೊಂಡು ಅಂತಹ ಗ್ರಾಮ ರಾಜ್ಯವನ್ನು ಕಟ್ಟಲಿಕ್ಕೆ ಹೊರಟಿದ್ದೇವೆ. ಈ ಎರಡು ಸಂಸ್ಥೆಗಳ ಬಗ್ಗೆ ಇವತ್ತಿನ ದಿವಸ ವಿಚಾರ ಮಾಡತಕ್ಕದ್ದು ಅವಶ್ಯಕವಾಗಿದೆ.

ಗ್ರಾಮಪಂಚಾಯಿತಿಗಳ ಕಾಯದೆಯಲ್ಲಿ ಗ್ರಾಮ ರಾಜ್ಯವನ್ನು ಕಟ್ಟುವುದಕ್ಕೆ ಸಾಕಷ್ಟು ಸೌಲಭ್ಯಗಳನ್ನು ಕೊಡುವುದಕ್ಕೆ ಹಣದ ಸಹಾಯವಿದೆಯೋ ಎನ್ನುವುದನ್ನು ಮುಖ್ಯವಾಗಿ ವಿಚಾರ ಮಾಡತಕ್ಕದ್ದು ಅವಶ್ಯಕ. ಮುಂಬಯಿ ಪ್ರಾಂತದ ವಿಲೇಜು ಪಂಚಾಯತಿಯ ಕಾಯದೆಯಲ್ಲಿ ಕಂದಾಯದ ಪ್ರತಿ ನೂರರಲ್ಲಿ ಮೂವತ್ತರಷ್ಟು ಹಣವನ್ನು ಗ್ರಾಮ ಪಂಚಾಯಿತಿಗಳಿಗಾಗಿ ಅವುಗಳ ಆಡಳಿತವನ್ನು ನಡೆಸುವುದಕ್ಕಾಗಿ ಸರಕಾರದವರು ಕೊಡಬೇಕು ಎನ್ನುವ ಕಲಮು ಇತ್ತು. ಇವತ್ತಿನ ದಿವಸ ನಮ್ಮ ಮುಂದೆ ಇರುವ ಕಾಯದೆಯಲ್ಲಿ ನೂರಕ್ಕೆ ಇಪ್ಪತ್ತರಷ್ಟನ್ನು ಆಯಾ ಗ್ರಾಮಗಳ ಪಂಚಾಯತಿಗಳಿಗೆ ಕೊಡಬೇಕು ಎಂದು ಇದರಲ್ಲಿ ಉಂಟು. ಮೈಸೂರು ಪ್ರಾಂತದ ಒಟ್ಟು ಕಂದಾಯ ಎಂದರೆ ಭೂಕಂದಾಯ ಮೂರುಕೋಟಿ ಎಪ್ಪತ್ತೇಳು ಲಕ್ಷ ಉಂಟು. ಇದರ ಐದನೇ ಒಂದು ಭಾಗ ಎಂದರೆ 70 ರಿಂದ 75 ಲಕ್ಷ ಬರಬಹುದೆಂದನಿಸುತ್ತದೆ. ಈ ಎಪ್ಪತ್ತೈದು ಲಕ್ಷ ರೂಪಾಯಿಗಳನ್ನು ನಾವು ನಮ್ಮ ಹಳ್ಳಿಯಲ್ಲಿ, ವಾಸಮಾಡುವ ಒಂದು ಕೋಟಿ ಐವತ್ತು ಲಕ್ಷ ಜನರಿಗೆ ಹಂಚಬೇಕಾಗಿದೆ. ಪ್ರತಿ ತಾಲ್ಲೂಕಿನಲ್ಲಿಯೂ ಕಂದಾಯದ ಭಾಗವಾಗಿ ಬರುತ್ತಿರುವುದನ್ನು ಆಯಾ ಗ್ರಾಮಗಳಿಗೆ ಹಂಚಬೇಕೆಂದು ಕಲಮುಗಳು ಇವೆ. ನಮ್ಮ ಪ್ರಾಂತದ ಕೆಲವು ಗ್ರಾಮಪಂಚಾಯತಿಗಳಲ್ಲಿ ಹದಿನೈದರಿಂದ ನೂರು ಜನರು ಇರುತ್ತಾರೆ. ಪ್ರತಿಯೊಂದು ಪಂಚಾಯಿತಿಯಲ್ಲಿ 1,500 ಜನಸಂಖ್ಯೆಗೆ ಮೇಲ್ಪಟ್ಟು ಇರಬೇಕು ಎನ್ನುವ ಕಲಮುಗಳೂ ಇಲ್ಲಿ ಉಂಟು. ಸಾಮಾನ್ಯವಾಗಿ ಒಂದು ಗ್ರಾಮಪಂಚಾಯತಿಯಲ್ಲಿ 1,500 ಜನಸಂಖ್ಯೆ ಇದೆ ಎಂದರೆ ಸರಕಾರದ ಕಂದಾಯದ ಭಾಗವಾಗಿ ಬರುವುದು ಕೇವಲ 700 ಅಥವಾ 800 ಅಥವಾ 900 ರೂಪಾಯಿಗಳಷ್ಟು ಮಾತ್ರ. ಎರಡನೇದು ಭೂಮಿಯ ಉತ್ಪನ್ನವಲ್ಲದೆ ಮನೆಗಳ ಮೇಲೆ Tax ನ್ನು ವಸೂಲು ಮಾಡುವುದೂ ಉಂಟು. ನಮ್ಮ ಅನುಭವದೊಳಗೆ ನಾವು ಪಂಚಾಯತಿಯೊಳಗೆ ನಿಗದಿ ಮಾಡುವ ಪ್ರಕಾರ ಲೆಕ್ಕ ಹಾಕಿದರೆ ಪ್ರತಿಯೊಂದು ಮನೆಗೂ ಎರಡೂವರೆ ರೂಪಾಯಿಗಳಂತೆ ಕರವನ್ನು ಹಾಕಬಹುದು. ಸಾವಿರದೈನೂರು ಜನಸಂಖ್ಯೆಯುಳ್ಳ ಒಂದು ಊರಿನಲ್ಲಿ ಒಂದುಮನೆಗೆ ಐದು ಜನರು ಎಂದು ಇಟ್ಟುಕೊಂಡರೂ ಸುಮಾರು 300 ಮನೆಗಳು ಇರುವ ಕಡೆಗಳಲ್ಲಿ ಒಂದೊಂದು ಗ್ರಾಮಪಂಚಾಯತಿ ಬರುತ್ತದೆ. ಒಂದು ಮನೆಗೆ ಎರಡು ರೂಪಾಯಿಗಳಂತೆ ಲೆಕ್ಕ ಹಾಕಿದರೆ ಸುಮಾರು 600 ರಿಂದ 800 ರೂಪಾಯಿಗಳು ಬರಬಹುದು. ಮುಖ್ಯವಾದ ಬಾಬುಗಳಲ್ಲಿ 1,400 ರಿಂದ 1,500 ರೂಪಾಯಿಗಳಷ್ಟು ಉತ್ಪನ್ನ ಬರುತ್ತದೆ. ಒಟ್ಟು ಕಂದಾಯ ಒಂದುಕೋಟಿ ಎಪ್ಪತ್ತೇಳು ಲಕ್ಷ ಆದಮೇಲೆ ಆದರ ಪ್ರಮಾಣ ಒಬ್ಬ ಮನುಷ್ಯನಿಗೆ ಎಂಟಾಣೆಯಂತೆ ಗ್ರಾಮಪಂಚಾಯತಿಗಳಿಗೆ ಉತ್ಪನ್ನ ಬರುತ್ತದೆ. ಸಾವಿರದೈನೂರು ಜನ ಸಂಖ್ಯೆಯುಳ್ಳ ಸಾಮಾನ್ಯ ಗ್ರಾಮಗಳಲ್ಲಿ ಈ ರೀತಿ ಲೆಕ್ಕ ಹಾಕಿದರೆ ಕಂದಾಯದ ಉತ್ಪನ್ನದ ಐದು ಆರ ರಷ್ಟು ಆಗುತ್ತದೆ. ಒಂದು ಗ್ರಾಮದಲ್ಲಿ ಪಂಚಾಯತಿಯನ್ನು ನಡೆಸಬೇಕಾದರೆ ಒಬ್ಬ ಸೆಕ್ರೆಟರಿ ಬೇಕು. ಇವತ್ತಿನ ದಿವಸ ಒಬ್ಬ ಸೆಕ್ರೆಟರಿ ಬೇಕಾದರೆ ಸುಮಾರು ತಿಂಗಳೊಂದಕ್ಕೆ 70 ರಿಂದ 75 ರವರೆಗೆ ಪಗಾರ ಕೊಡಬೇಕಾಗಿ ಬರುತ್ತದೆ. ಈಗ ವಿಧೇಯಕದಲ್ಲಿರುವಂತೆ ಮೂರು ನಾಲ್ಕು ಸಣ್ಣ ಸಣ್ಣ ಗ್ರಾಮಗಳು ಸೇರಿ ಒಂದು ಪಂಚಾಯತಿ ಬರುತ್ತದೆ. ಇತರ ಖರ್ಚುಗಳಿಗಾಗಿ ಒಂದು ಐವತ್ತು ರೂಪಾಯಿಗಳು ಎಂದು ಇಟ್ಟುಕೊಂಡರೂ ಕೇವಲ ಪಗಾರಕ್ಕಾಗಿ 70 ಮತ್ತು ಇನ್ನಿತರ ಖರ್ಚುಗಳಿಗಾಗಿ ಐವತ್ತು ರೂಪಾಯಿಗಳು ಎಂದರೆ ಒಟ್ಟು 120 ರೂಪಾಯಿಗಳವರೆಗೆ ಒಂದು ಪಂಚಾಯತಿಯಲ್ಲಿ ಖರ್ಚು ಮಾಡಬೇಕಾದರೆ ವರ್ಷಕ್ಕೆ ಒಂದು ಒಂದೂವರೆ ಸಾವಿರ ರೂಪಾಯಿಗಳವರೆಗೆ ಖರ್ಚು ಬರುತ್ತದೆ. ಕೆಲವು ಕಡೆಗಳಲ್ಲಿ ಪಂಚಾಯತಿಗಳಿಗಾಗಿ ಬರುವ ಉತ್ಪನ್ನ ಕೇವಲ ನೂರರಿಂದ ಇನ್ನೂರರವರೆಗೆ ಬರುತ್ತದೆ ಎಂದು ಕಾಣುತ್ತದೆ. ಹೀಗೆ ಗ್ರಾಮಪಂಚಾಯತಿಗಳ ಉತ್ಪನ್ನವನ್ನು ನಾವು ವಿಚಾರಮಾಡಿ ನೋಡಿದರೆ ಕೇವಲ ಒಬ್ಬ ಸೆಕ್ರೆಟರಿಯನ್ನು ಇಟ್ಟುಕೊಳ್ಳುವುದಕ್ಕೇ ಸಾಕಾಗಿ ಹೋಗುತ್ತದೆ. ಗ್ರಾಮಪಂಚಾಯತಿಗಳ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಂಡು ಗ್ರಾಮಾಭಿವೃದ್ಧಿ ಮಾಡುವುದಕ್ಕೆ ಸಾಕಷ್ಟು ಸಹಾಯಗಳು ಈ ಕಾಯದೆಯಲ್ಲಿಲ್ಲ ಎಂದು ಇದನ್ನು ಸರಕಾರದ ದೃಷ್ಟಿಗೆ ತರಬಯಸುತ್ತೇನೆ.

ಆದುದರಿಂದ ನನ್ನ ವಿನಂತಿ ಹೀಗಿದೆ. ಪ್ರತಿ ನೂರಕ್ಕೆ ಇಪ್ಪತ್ತರಷ್ಟನ್ನು ಗ್ರಾಮಪಂಚಾಯತಿಗಳಿಗೆ ಕೊಡಬೇಕೆಂದು ಈ ವಿಧೇಯಕದಲ್ಲಿದೆ. ಇದನ್ನು ತಿದ್ದುಪಡಿಮಾಡಿ ಕನಿಷ್ಠಪಕ್ಷ ನೂರಕ್ಕೆ ಮೂವತ್ತು ಅಥವಾ ಮುವ್ವತ್ತೈದರಷ್ಟು ಪ್ರತಿ ಗ್ರಾಮಪಂಚಾಯತಿಗೂ ಕೊಡಬೇಕೆಂದು ಈ ವಿಧೇಯಕದಲ್ಲಿ ಮಾಡಬೇಕೆಂದು ನನ್ನ ವಿನಂತಿ. 30 ರಿಂದ 35 ರವರೆಗೆ ಸಾಮಾನ್ಯವಾಗಿ ಕೊಡತಕ್ಕದ್ದು. ಇದರಮೇಲೆ ಶೇಕಡಾ ಐದರಷ್ಟು ಕಂದಾಯದಿಂದ ಕೊಡಬೇಕೆಂದಿದೆ ಎಂದರೆ ತಾಲ್ಲೂಕು ಬೋರ್ಡಿಗೆ ಶೇಕಡ ನಲವತ್ತರಷ್ಟು ಮತ್ತು ಗ್ರಾಮಪಂಚಾಯತಿಗಳಿಗೆ ಶೇಕಡ

ನಲವತ್ತರಷ್ಟು ಎಂದರೆ ಒಟ್ಟಿನಲ್ಲಿ ಶೇಕಡ ಎಂಬತ್ತರಷ್ಟು ಆಗಿ ಉಳಿಯುವ ಶೇಕಡ ಇಪ್ಪತ್ತರಷ್ಟನ್ನು ಸಾಮಾನ್ಯವಾಗಿ ವೆಚ್ಚದ ಬಾಬುಗಳಿಗೆ ಖರ್ಚು ಮಾಡ ಬೇಕೆಂದು ನಲಹೆ ಮಾಡುತ್ತೇನೆ. ಕಂದಾಯದ ಬಹು ಭಾಗವನ್ನು ಗ್ರಾಮಪಂಚಾಯತಿಗಳಿಗೆ ಕೊಡುವು ದಕ್ಕೆ ನರಕಾರದವರು ಮನಸ್ಸು ಮಾಡಬೇಕು; ಆದ ರಿಂದ ಅವರಿಗೆ ಕಲ್ಯಾಣವಾಗುತ್ತದೆ. ಕಂದಾಯದ ಭಾಗದಲ್ಲಿ ಈ ರೀತಿಯಾಗಿ ಕೊಟ್ಟು ಉಳಿಯುವುದನ್ನು ಇಲ್ಲಿರುವ ಗ್ರಾಮಗಳ ಪ್ರಜೆಗಳಿಗೆ ಕೊಟ್ಟು ಗ್ರಾಮಾಭಿ ವೃದ್ಧಿಯಾಗುವುದಕ್ಕೆ ನಹಾಯ ಮಾಡಬೇಕು ಎಂದು ನಾನು ನರಕಾರಕ್ಕೆ ವಿನಂತಿ ಮಾಡುತ್ತೇನೆ.

ಇವೊತ್ತಿನ ದಿವನ, 1959ನೆಯ ಇನವಿಯಲ್ಲಿ ಭೂಕಂದಾಯದಲ್ಲಿ ಎಷ್ಟೇ ಭಾಗವನ್ನಾದರೂ ನರ ಕಾರದವರು ಇಟ್ಟುಕೊಳ್ಳುವುದಕ್ಕೆ ಹಕ್ಕುದಾರರು ಎಂದು ಕಂಡುಬರುವುದಿಲ್ಲ, ಏಕೆಂದರೆ, ಈಗ 40-50 ವರ್ಷಗಳ ಹಿಂದೆ ಆದರೆ,ಭೂಕಂದಾಯವೇ ನರ್ಕಾರದ ಒಂದು ಮುಖ್ಯ ಉತ್ಪನ್ನವಾಗಿತ್ತು. ಈ ಹೊತ್ತು ನಾನಾ ರೀತಿಯ ಬೇರೆ ಉತ್ಪನ್ನಗಳು ನರ್ಕಾರಕ್ಕಿವೆ. ಇತ್ತೀಚೆಗೆ ಹೋದ ವರ್ಷ ತಾನೆ ಪಾನು ಮಾಡಿದ ಅಗ್ರಿಕಲ್ಚರಲ್ ಇಕಂ ಟಾಕ್ಸ್‌ನಿಂದ, ಕಳೆದ ವರ್ಷದ ಬಡ್ಜೆಟ್ ಎಸ್ಟಿಮೇಟುಗಳ ಪ್ರಕಾರ ಒಂದು ಕೋಟಿ ರೂಪಾಯಿಗಳವರೆಗೂ ನರ್ಕಾರಕ್ಕೆ ಉತ್ಪತ್ತಿ ಬರುತ್ತಿದೆ, ಆದ್ದರಿಂದ ಈ ಬಗೆ ಬರುವ ಒಂದು ಕೋಟಿ ರೂಪಾಯಿಗಳನ್ನು ಅದಕ್ಕೆ ಉಪಯೋಗ ಮಾಡ ಬಹುದು. ಆದ್ದರಿಂದ ಕಂದಾಯದ ರೂಪದಲ್ಲಿ ಏನು ಬರುತ್ತಿದೆಯೋ ಅದರಲ್ಲಿ ನಾಮಾನ್ಯ ವೆಚ್ಚದ ನಲು ವಾಗಿ ಖರ್ಚಾಗುವಷ್ಟನ್ನು ಬಿಟ್ಟು ಉಳಿದದ್ದನ್ನೆಲ್ಲಾ ಇದಕ್ಕಾಗಿ ವಿನಿಯೋಗಿನಬೇಕೆಂದು ಹೇಳುತ್ತೇನೆ.

ಇಷ್ಟೇ ಅಲ್ಲದೆ, ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ಅನೇಕ ರೀತಿಯಿಂದ ಉತ್ಪತ್ತಿಗಳು ನರ್ಕಾರಕ್ಕೆ ಬರುತ್ತಿವೆ. ಸೇಲ್ಸ್ ಟಾಕ್ಸ್‌ನ್ನು ಇತ್ತೀಚೆಗೆ ತಿದ್ದು ಪಡಿ ಮಾಡಿರುವುದರ ಮೇರೆಗೆ, ಹತ್ತಿ, ಶೇಂಗ, ಕಾಯಿಪಲ್ಯ ಮುಂತಾಗಿ ಒಕ್ಕಲಿಗ ಬೆಳೆಯತಕ್ಕ ಅನೇಕ ಪದಾರ್ಥಗಳ ಮೇಲೆ ತೆರಿಗೆಬಿದ್ದು, ಆದರಿಂದ ಹೆಚ್ಚಿನ ಉತ್ಪತ್ತಿ ನರ್ಕಾರಕ್ಕೆ ಬರುತ್ತಿದೆ. ಹತ್ತಿ, ಶೇಂಗ ಎರಡರಿಂದಾಗಿಯೇ ಒಂದು ಕೋಟಿ ರೂಪಾಯಿ ಗಳಷ್ಟು ಹೆಚ್ಚಿಗೆ ಸೇಲ್ಸ್ ಟಾಕ್ಸ್ ಬರುತ್ತದೆ. ಇದೆಲ್ಲ ವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಭೂ-ಕಂದಾಯದ ಬಹುಭಾಗವನ್ನು, ಗ್ರಾಮಪಂಚಾಯತಿಗಳ ಕಡೆಗೆ ಹೊರಳಿನಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಆಮೇಲೆ, ಮಂತ್ರಿಗಳು ತಮ್ಮ ಪ್ರಾರಂಭ ಭಾಷಣ ದಲ್ಲಿ ಒಂದು ವಿಷಯ ನೂಚಿನಿದರು; ಕೆಲವು ತಾಲ್ಲೂಕು ಗಳಲ್ಲಿ ಕಂದಾಯದ ಉತ್ಪನ್ನ ಬಹಳ ಕಡಮೆ ಇರು ತ್ತದೆ; ಇನ್ನು ಕೆಲವು ತಾಲ್ಲೂಕುಗಳಲ್ಲಿ ಹೆಚ್ಚಿಗೆ ಇರು ತ್ತದೆ ; ಹೇಗೇ ಇರಲಿ, ಪ್ರತಿಯೊಂದು ಗ್ರಾಮಕ್ಕೂ ಅಥವಾ ತಾಲ್ಲೂಕಿಗೂ ನಮಾನಾದ ಕಂದಾಯದ ಭಾಗ ದೊರೆಯುವಂತಾಗಬೇಕೆಂದು ಹೇಳಿ, ಕಂದಾಯದ ಒಂದು ಅಂತವನ್ನು ಪೂಲ್ ಮಾಡಿಟ್ಟುಕೊಂಡು ಯಾವಗ್ರಾಮಕ್ಕೆ ಕಡಮೆ ಹುಟ್ಟುವಳಿ ಇದೆ, ಅಲ್ಲಿಗೇ ಹೆಚ್ಚು ಹಂಚಿಕೆ ಮಾಡಿಕೊಡಬೇಕೆಂದಿದೆಯೆಂದು ಹೇಳಿದರು. ಈ ವಿಷಯದಲ್ಲಿ ನಾನು ಒಂದು ಮಾತು ಹೇಳಬಯಸುತ್ತೇನೆ, ಈಗಿನ ಕಂದಾಯದ ಪದ್ಧತಿ ಅಥವಾ ರೀತಿ 50 ವರ್ಷಗಳ ಹಿಂದೆ ಗೊತ್ತುಮಾಡಿ ದಂಥಾದ್ದು. ಆಗ್ಗೆ ಕೆಲವು ಕಡೆ ಉನುಬು ಭೂಮಿ ಯೆಂದು ನಾಲ್ಕಾಣೆ ಕಂದಾಯ ಹಾಕಿ, ಚೆನ್ನಾಗಿ ಹತ್ತಿ, ಜೋಳ; ಬತ್ತ ಬೆಳೆಯುವ ಭೂಮಿಗೆ ಎರಡು— ಎರಡೂವರೆ ರೂಪಾಯಿಗಳವರೆಗೂ ಹಾಕಿದ್ದಾರೆ. ಈಗ ನೋಡಿದರೆ, ಈಚಿನ 40-50 ವರ್ಷಗಳಲ್ಲಿ ಒಕ್ಕಲುತನದ ರೀತಿಯೇ ಬದಲಾಯಿಸಿದೆ. ಇಂದು ಏನೂ ಬೆಳೆಯದೆಂದು ಹೇಳಿದ ಉನುಬು ಭೂಮಿಯಲ್ಲಿ ಸೊಗಸಾಗಿ ಹತ್ತಿ, ಶೇಂಗ ಮುಂತಾಗಿ ನಾನಾ commercial crops ಬೆಳೆಯುತ್ತಿದ್ದಾರೆ. ಇದನ್ನು ಗಮನಿನುವುದಾದರೆ, ಕಂದಾಯದ ದರ ಕಡಮೆ ಯಿದ್ದಾಕ್ಷಣಕ್ಕೆ ಆ ಭಾಗದವರಿಗೆ ಕಡಮೆ ಉತ್ಪತ್ತಿ ಯಿದೆಯೆಂದು ಭಾವಿಸಿ, ಹೆಚ್ಚು ಕಂದಾಯ ಕೊಡುವ ವರ ಭಾಗದಿಂದ ಕಡಮೆ ಕಂದಾಯ ಕೊಡುವವರ ಕಡೆಗೆ ಹೆಚ್ಚಿನ ಹಣವನ್ನು ಹೊರಳಿನುವುದು ಯೋಗ್ಯ ವಲ್ಲವೆಂದು ಹೇಳುತ್ತೇನೆ ಏಕೆಂದರೆ, ಈಗ ತಾವು resettlement ಮಾಡಿನುವುದಾದರೆ ಮೊದಲು ಹೇಳಿದ ಉನುಬು ಭೂಮಿಗೆ ಇಂದು ಹತ್ತಿ, ಶೇಂಗ ಬೆಳೆಯುವ ಭೂಮಿಗೆ ನರಿನಮಾನವಾಗಿ 4-5-ರೂಪಾ ಯಗಳನ್ನು ವಿಧಿನಬಹುದು. ಈ ದೃಷ್ಟಿಯಿಂದ ತರಬಿನ ಮೇಲೆ ನೋಡಿ, ಒಂದು ಹಳ್ಳಿ ನಿಕೃಷ್ಟವೆನ್ನುವುದು ಇನ್ನೊಂದು ಹಳ್ಳಿ ಉತ್ತಮ ದರ್ಜೆಯದೆನ್ನುವುದು ನರಿಯಲ್ಲ; ಅದು ತಪ್ಪುರೀತಿ ಎಂದು ಹೇಳುತ್ತೇನೆ.

